Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜಪತ್ರ

( EXTRAORDINARY )
( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं. १ | नई दिल्ली, सोमवार, जून ८, २०२० | ज्येष्ठ २६, १९४२ (शका) | खंड ५० |
| No. 1 | New Delhi, Monday, June 8, 2020 | Jyeshta 26, 1942 (Saka) | Vol. 50 |
| ನಂ. ೧ | ನವ ದೆಹಲಿ, ಸೋಮವಾರ, ಜೂನ್ ೮, ೨೦೨೦ | ಜ್ಯೇಷ್ಠ ೨೬, ೧೯೪೨ (ಶಕ) | ಸಂಪುಟ ೫೦ |

**Ministry of Law and Justice**
Legislative Department
New Delhi, 08th June, 2020

ಕಾನೂನು ಮತ್ತು ನ್ಯಾಯ ಮಂತ್ರಾಲಯ
ವಿಧಾಯೀ ಇಲಾಖೆ
**ನವದೆಹಲಿ, 08ನೇ ಜೂನ್ 2020**

The Translation in Kannada of the following Acts, namely:- (1) The Official Trustees Act, 1913 (2 of 1913) (2) The Factories Act, 1948 (63 of 1948) (3) The Chit Funds Act, 1982 ( 40 of 1982) (4) The Sexual Harassment of Women at Work Place (Prevention, Prohibition and Redressal) Act, 2013 (14 of 2013) (5) The National Food Security Act, 2013 (20 of 2013) - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

ಈ ಕೆಳಕಂಡ ಅಧಿನಿಯಮಗಳು ಎಂದರೆ:- (1) ಅಧಿಕೃತ ನ್ಯಾಸಧಾರಿಗಳ ಅಧಿನಿಯಮ, 1913 (1913ರ 2) (2) ಕಾರ್ಖಾನೆಗಳ ಅಧಿನಿಯಮ, 1948 (1948ರ 63) (3) ಚಿಟ್ ಫಂಡ್‌ಗಳ ಅಧಿನಿಯಮ, 1982 (1982ರ 40) (4) ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ಪ್ರತಿಬಂಧ, ನಿವಾರಣೆ ಮತ್ತು ಪರಿಹಾರ) ಅಧಿನಿಯಮ, 2013 (2013ರ 14) (5) ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ, 2013 (2013ರ 20)– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ, 2013

## (2013ರ ಅಧಿನಿಯಮ ಸಂಖ್ಯೆ 20)

[10ನೇ ಸಪ್ಟೆಂಬರ್, 2013]

ಜನರು ಗೌರವದಿಂದ ಜೀವನ ನಡೆಸುವುದಕ್ಕಾಗಿ ಅವರಿಗೆ ಕೈಗೆಟುಕುವ ಬೆಲೆಗಳಲ್ಲಿ ಸಾಕಷ್ಟು ಪ್ರಮಾಣದ ಗುಣಮಟ್ಟದ ಆಹಾರ ಪಡೆಯುವ ಅವಕಾಶವನ್ನು ಸುನಿಶ್ಚಿತಪಡಿಸುವ ಮೂಲಕ ಅವರ ಜೀವನದಲ್ಲಿ ಆಹಾರ ಮತ್ತು ಪೌಷ್ಟಿಕಾಂಶ ಭದ್ರತೆಯನ್ನು ಒದಗಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಅಧಿನಿಯಮ.

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, –

## ಅಧ್ಯಾಯ – I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಅನ್ಯಥಾ ಉಪಬಂಧಿಸಿದಂತೆ ಹೊರತು, ಇದು 2013ರ ಜುಲೈ 5ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.–**ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) "ಅಂಗನವಾಡಿ" ಎಂದರೆ, 4ನೇ ಪ್ರಕರಣದಲ್ಲಿ, 5ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದಲ್ಲಿ, 6ನೇ ಪ್ರಕರಣದಲ್ಲಿ ಹೇಳಿರುವ ಸೇವೆಗಳನ್ನು ಒದಗಿಸುವುದಕ್ಕಾಗಿ ಕೇಂದ್ರ ಸರ್ಕಾರದ ಮಕ್ಕಳ ಸಮಗ್ರ ಅಭಿವೃದ್ಧಿ ಸೇವಾ ಯೋಜನೆಯ ಮೇರೆಗೆ ಸ್ಥಾಪಿಸಿದ ಮಕ್ಕಳ ಪಾಲನೆ ಮತ್ತು ಅಭಿವೃದ್ಧಿ ಕೇಂದ್ರ;

(2) 'ಕೇಂದ್ರ ಸಂಗ್ರಹಣಾಗಾರ" ಎಂದರೆ,

(i) ಕನಿಷ್ಠ ಬೆಂಬಲ ಬೆಲೆ ಕಾರ್ಯಾಚರಣೆಗಳ ಮೂಲಕ ಕೇಂದ್ರ ಸರ್ಕಾರವು ಮತ್ತು ರಾಜ್ಯ ಸರ್ಕಾರವು ಸಂಗ್ರಹಿಸಿದ;

(ii) ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇರೆಗೆ, ವಿಪತ್ತು ಪರಿಹಾರ ಮತ್ತು ಇತರ ಅಂಥ ಯೋಜನೆಗಳು ಒಳಗೊಂಡಂತೆ ಇತರ ಕಲ್ಯಾಣ ಯೋಜನೆಗಳ ಮೇರೆಗೆ, ಹಂಚಿಕೆ ಮಾಡುವುದಕ್ಕಾಗಿ ನಿರ್ವಹಿಸಿರುವ;

(iii) ಉಪಖಂಡ (ii)ರಲ್ಲಿ ತಿಳಿಸಿರುವ ಯೋಜನೆಗಳಿಗೆ ಮೀಸಲುಗಳಾಗಿ ಇಟ್ಟಿರುವ

– ಆಹಾರ ಧಾನ್ಯಗಳ ದಾಸ್ತಾನು;

3) "ಅರ್ಹ ಕುಟುಂಬಗಳು" ಎಂದರೆ, 3ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ತಿಳಿಸಿರುವ ಆದ್ಯತಾ ಕುಟುಂಬಗಳು ಮತ್ತು ಅಂತ್ಯೋದಯ ಅನ್ನ ಯೋಜನೆಯ ಅಡಿಯಲ್ಲಿ ಬರುವ ಕುಟುಂಬಗಳು;

4) 'ನ್ಯಾಯ ಬೆಲೆ ಅಂಗಡಿ' ಎಂದರೆ, ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ಪಡಿತರ ಚೀಟಿ ಹೊಂದಿರುವವರಿಗೆ ಆವಶ್ಯಕ ಸರಕುಗಳನ್ನು ವಿತರಿಸಲು, ಆವಶ್ಯಕ ಸರಕುಗಳ ಅಧಿನಿಯಮ, 1955ರ (1955ರ 10) 3ನೇ ಪ್ರಕರಣದ ಮೇರೆಗೆ ಹೊರಡಿಸಿದ ಆದೇಶದ ಮೂಲಕ ಯಾವ ಅಂಗಡಿಗೆ ಲೈಸನ್ಸನ್ನು ನೀಡಲಾಗಿದೆಯೋ ಆ ಅಂಗಡಿ;

5) "ಆಹಾರ ಧಾನ್ಯಗಳು" ಎಂದರೆ, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಗುಣಮಟ್ಟಗಳಿಗೆ ಅನುಗುಣವಾದ ಅಕ್ಕಿ, ಗೋಧಿ ಅಥವಾ ಕಚ್ಚಾ ಧಾನ್ಯಗಳು ಅಥವಾ ಅವುಗಳ ಯಾವುದೇ ಸಂಯೋಜನೆ;

6) 'ಆಹಾರ ಭದ್ರತೆ' ಎಂದರೆ, ಅಧ್ಯಾಯ–II ರಲ್ಲಿ ನಿರ್ದಿಷ್ಟಪಡಿಸಿರುವ, ಪಡೆಯಲು ಹಕ್ಕುಳ್ಳ ಪ್ರಮಾಣದ ಆಹಾರ ಧಾನ್ಯಗಳ ಮತ್ತು ಊಟದ ಪೂರೈಕೆ;

7) "ಆಹಾರ ಭದ್ರತೆ ಭತ್ಯೆ" ಎಂದರೆ, ಹಕ್ಕುಳ್ಳ ವ್ಯಕ್ತಿಗಳಿಗೆ ಸಂಬಂಧಪಟ್ಟ ರಾಜ್ಯ ಸರ್ಕಾರವು 8ನೇ ಪ್ರಕರಣದ ಮೇರೆಗೆ ಪಾವತಿಸಬೇಕಾದ ಹಣದ ಮೊತ್ತ;

8) “ಸ್ಥಳೀಯ ಪ್ರಾಧಿಕಾರ” ಎಂದರೆ, ಪಂಚಾಯತಿ, ಪುರಸಭೆ, ಜಿಲ್ಲಾ ಮಂಡಲಿ, ದಂಡು ಪ್ರದೇಶ ಮಂಡಳಿ, ಪಟ್ಟಣ ಯೋಜನಾ ಪ್ರಾಧಿಕಾರ ಮತ್ತು ಪಂಚಾಯತಿಗಳು ಅಸ್ತಿತ್ವದಲ್ಲಿರದ ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್ ಮತ್ತು ತ್ರಿಪುರ ರಾಜ್ಯಗಳಲ್ಲಿ, ಗ್ರಾಮ ಪರಿಷತ್ತು ಅಥವಾ ಸಮಿತಿ ಅಥವಾ ಸಂವಿಧಾನದ ಅಥವಾ ಸ್ವಯಂ ಆಡಳಿತಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅಧಿಕೃತವಾದ, ಯಾವುದೇ ಹೆಸರಿನಿಂದ ಕರೆಯಲಾಗುವ, ಇತರ ಯಾವುದೇ ಸಂಸ್ಥೆ ಅಥವಾ ನಿರ್ದಿಷ್ಟ ಸ್ಥಳೀಯ ಪ್ರದೇಶದೊಳಗೆ ನಾಗರೀಕ ಸೇವೆಗಳ ನಿಯಂತ್ರಣ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಯಾವ ಪ್ರಾಧಿಕಾರಕ್ಕೆ ಅಥವಾ ಸಂಸ್ಥೆಗೆ ಒದಗಿಸಲಾಗಿದೆಯೋ ಆ ಯಾವುದೇ ಇತರ ಪ್ರಾಧಿಕಾರ ಅಥವಾ ಸಂಸ್ಥೆ;

9) “ಊಟ” ಎಂದರೆ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂತೆ, ಬಿಸಿಬಿಸಿಯಾಗಿ ತಯಾರಿಸಿದ ಅಥವಾ ಮೊದಲೇ ತಯಾರಿಸಿದ್ದು ಬಡಿಸುವ ಮೊದಲು ಬಿಸಿಮಾಡಿದ ಊಟ ಅಥವಾ ಮನೆಗೆ ಒಯ್ಯುವ ಪಡಿತರ;

10) “ಕನಿಷ್ಠ ಬೆಂಬಲ ಬೆಲೆ” ಎಂದರೆ, ಕೇಂದ್ರೀಕೃತ ಸಂಗ್ರಹಣೆಗಾಗಿ ಕೇಂದ್ರ ಸರ್ಕಾರವು ಮತ್ತು ರಾಜ್ಯ ಸರ್ಕಾರವು ಮತ್ತು ಅವುಗಳ ಏಜೆನ್ಸಿಗಳು ರೈತರಿಂದ ಆಹಾರ ಧಾನ್ಯಗಳನ್ನು ಯಾವ ಬೆಲೆಯಲ್ಲಿ ಸಂಗ್ರಹಿಸುತ್ತವೆಯೋ ಅಂಥ ಕೇಂದ್ರ ಸರ್ಕಾರವು ಪ್ರಕಟಿಸಿದ ಖಾತರಿ ಬೆಲೆ;

11) “ಅಧಿಸೂಚನೆ” ಎಂದರೆ, ಈ ಅಧಿನಿಯಮದ ಮೇರೆಗೆ ಹೊರಡಿಸಿದ ಮತ್ತು ರಾಜಪತ್ರದಲ್ಲಿ ಪ್ರಕಟಿಸಿರುವ ಅಧಿಸೂಚನೆ;

12) “ಇತರ ಕಲ್ಯಾಣ ಯೋಜನೆಗಳು” ಎಂದರೆ, ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಜೊತೆಗೆ ಯಾವ ಯೋಜನೆಗಳ ಅಡಿಯಲ್ಲಿ ಆ ಯೋಜನೆಗಳ ಭಾಗವಾಗಿ ಆಹಾರ ಧಾನ್ಯಗಳನ್ನು ಅಥವಾ ಊಟವನ್ನು ಪೂರೈಸಲಾಗುತ್ತದೆಯೋ, ಅಂಥ ಸರ್ಕಾರಿ ಯೋಜನೆಗಳು;

13) “ಅಂಗವಿಕಲ ವ್ಯಕ್ತಿ” ಎಂದರೆ, ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995ರ (1996ರ 1) 2ನೇ ಪ್ರಕರಣದ (ಎಫ್) ಖಂಡದಲ್ಲಿ ಅಂಗವಿಕಲ ವ್ಯಕ್ತಿ ಎಂದು ಪರಿಭಾಷಿಸಿರುವ ವ್ಯಕ್ತಿ;

14) “ಆದ್ಯತಾ ಕುಟುಂಬಗಳು” ಎಂದರೆ, 10ನೇ ಪ್ರಕರಣದ ಮೇರೆಗೆ ಆದ್ಯತಾ ಕುಟುಂಬಗಳು ಎಂದು ಗುರುತಿಸಲಾಗಿರುವ ಕುಟುಂಬಗಳು;

15) ‘ನಿಯಮಿಸಿದ’ ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

16) ‘ಪಡಿತರ ಚೀಟಿ’ ಎಂದರೆ, ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ನ್ಯಾಯ ಬೆಲೆ ಅಂಗಡಿಗಳಿಂದ ಆವಶ್ಯಕ ಸರಕುಗಳನ್ನು ಖರೀದಿಸುವುದಕ್ಕಾಗಿ ರಾಜ್ಯ ಸರ್ಕಾರದ ಆದೇಶದ ಅಥವಾ ಪ್ರಾಧಿಕಾರದ ಮೇರೆಗೆ ನೀಡಿರುವ ದಾಖಲೆ;

17) ‘ಗ್ರಾಮೀಣ ಪ್ರದೇಶ’ ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸ್ಥಾಪಿಸಿದ ಅಥವಾ ರಚಿಸಿದ ಯಾವುದೇ ನಗರ ಸ್ಥಳೀಯ ಸಂಸ್ಥೆಯ ಅಥವಾ ದಂಡು ಪ್ರದೇಶ ಮಂಡಲಿಯ ವ್ಯಾಪ್ತಿಯಲ್ಲಿ ಬರುವಂಥ ಪ್ರದೇಶಗಳನ್ನು ಹೊರತುಪಡಿಸಿ ಒಂದು ರಾಜ್ಯದಲ್ಲಿನ ಯಾವುದೇ ಪ್ರದೇಶ;

18) “ಅನುಸೂಚಿ” ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಿರುವ ಅನುಸೂಚಿ;

19) ‘ಹಿರಿಯ ನಾಗರಿಕ’ ಎಂದರೆ, ತಂದೆ ತಾಯಿಯರ ಮತ್ತು ಹಿರಿಯ ನಾಗರಿಕರ ಪಾಲನೆ, ಪೋಷಣೆ ಮತ್ತು ಕಲ್ಯಾಣ ಅಧಿನಿಯಮ, 2007ರ (2007ರ 56) 2ನೇ ಪ್ರಕರಣದ (ಎಚ್) ಖಂಡದಲ್ಲಿ ಹಿರಿಯ ನಾಗರಿಕ ಎಂದು ಪರಿಭಾಷಿಸಲಾಗಿರುವ ವ್ಯಕ್ತಿ;

20) ‘ಸಾಮಾಜಿಕ ಪರಿಶೋಧನೆ’ ಎಂದರೆ, ಯಾವ ಪ್ರಕ್ರಿಯೆಯಲ್ಲಿ ಜನರು ಸಾಮೂಹಿಕವಾಗಿ ಯೋಜನೆಯನ್ನು ಮೇಲ್ವಿಚಾರಣೆ ಮಾಡುವರೋ ಮತ್ತು ಮೌಲ್ಯಮಾಪನ ಮಾಡುವರೋ ಮತ್ತು ಕಾರ್ಯಕ್ರಮವನ್ನು ಅಥವಾ ಕಾರ್ಯ ಯೋಜನೆಯನ್ನು ಅನುಷ್ಠಾನಗೊಳಿಸುವರೋ ಆ ಪ್ರಕ್ರಿಯೆ;

21) “ರಾಜ್ಯ ಆಯೋಗ” ಎಂದರೆ, 16ನೇ ಪ್ರಕರಣದ ಮೇರೆಗೆ ರಚಿಸಿದ ರಾಜ್ಯ ಆಹಾರ ಆಯೋಗ;

22) ಕೇಂದ್ರಾಡಳಿತ ಪ್ರದೇಶದ ಸಂಬಂಧದಲ್ಲಿ “ರಾಜ್ಯ ಸರ್ಕಾರ” ಎಂದರೆ, ಸಂವಿಧಾನದ 239ನೇ ಅನುಚ್ಛೇದದ ಮೇರೆಗೆ ನೇಮಕಗೊಂಡ ಅದರ ಆಡಳಿತಗಾರ;

23) “ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆ” ಎಂದರೆ, ಪಡಿತರ ಚೀಟಿ ಹೊಂದಿರುವವರಿಗೆ ನ್ಯಾಯ ಬೆಲೆ ಅಂಗಡಿಗಳ ಮೂಲಕ ಆವಶ್ಯಕ ಸರಕುಗಳ ವಿತರಣೆಗಾಗಿ ಮಾಡಿರುವ ವ್ಯವಸ್ಥೆ;

24) ‘ವಿಚಕ್ಷಣ ಸಮಿತಿ’ ಎಂದರೆ, ಈ ಅಧಿನಿಯಮದ ಮೇರೆಗೆ ಎಲ್ಲಾ ಕಾರ್ಯ ಯೋಜನೆಗಳ ಅನುಷ್ಠಾನದ ಉಸ್ತುವಾರಿ ನಡೆಸಲು 29ನೇ ಪ್ರಕರಣದ ಮೇರೆಗೆ ರಚಿಸಿದ ಸಮಿತಿ;

25) ಈ ಅಧಿನಿಯಮದಲ್ಲಿ ಪರಿಭಾಷಿಸಿರದ, ಆದರೆ ಅತ್ಯಾವಶ್ಯಕ ಸರಕುಗಳ ಅಧಿನಿಯಮ, 1955ರಲ್ಲಿ (1955ರ 10) ಅಥವಾ ಇತರ ಯಾವುದೇ ಸಂಬಂಧಪಟ್ಟ ಅಧಿನಿಯಮದಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು, ಆ ಅಧಿನಿಯಮಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

## ಅಧ್ಯಾಯ –II

## ಆಹಾರ ಭದ್ರತೆಗಾಗಿ ವ್ಯವಸ್ಥೆಗಳು

**3. ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ಅರ್ಹ ಕುಟುಂಬಗಳಿಗೆ ಸೇರಿದ ವ್ಯಕ್ತಿಗಳು ರಿಯಾಯಿತಿ ಬೆಲೆಗಳಲ್ಲಿ ಆಹಾರ ಧಾನ್ಯಗಳನ್ನು ಪಡೆಯಲು ಹಕ್ಕು.–** (1) 10ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಗುರುತಿಸಿರುವ ಆದ್ಯತಾ ಕುಟುಂಬಗಳಿಗೆ ಸೇರಿದ ಪ್ರತಿಯೊಬ್ಬ ವ್ಯಕ್ತಿಯು, ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ರಾಜ್ಯ ಸರ್ಕಾರದಿಂದ ಅನುಸೂಚಿ–I ರಲ್ಲಿ ನಿರ್ದಿಷ್ಟಪಡಿಸಿದ ರಿಯಾಯಿತಿ ಬೆಲೆಗಳಲ್ಲಿ ಪ್ರತಿ ತಿಂಗಳಿಗೆ ಪ್ರತಿ ವ್ಯಕ್ತಿಗೆ ಐದು ಕಿಲೋಗ್ರಾಂ ಆಹಾರ ಧಾನ್ಯಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಅಂತ್ಯೋದಯ ಅನ್ನ ಯೋಜನೆಯ ಅಡಿಯಲ್ಲಿ ಬರುವ ಕುಟುಂಬಗಳು, ಸದರಿ ಯೋಜನೆಯಲ್ಲಿ ಪ್ರತಿಯೊಂದು ರಾಜ್ಯಕ್ಕೆ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿರಬಹುದಾದಷ್ಟರ ಮಟ್ಟಿಗೆ, ಅನುಸೂಚಿ – I ರಲ್ಲಿ ನಿರ್ದಿಷ್ಟಪಡಿಸಿದ ಬೆಲೆಗಳಲ್ಲಿ ಪ್ರತಿ ತಿಂಗಳಿಗೆ ಪ್ರತಿ ಕುಟುಂಬಕ್ಕೆ ಮೂವತ್ತೈದು ಕಿಲೋಗ್ರಾಂಗಳ ಆಹಾರ ಧಾನ್ಯಗಳನ್ನು ಪಡೆಯಲು ಹಕ್ಕು ಹೊಂದಿರತಕ್ಕದ್ದು:

ಮತ್ತು ಪರಂತು, ಈ ಅಧಿನಿಯಮದ ಮೇರೆಗೆ ಯಾವುದೇ ರಾಜ್ಯಕ್ಕೆ ವರ್ಷಕ್ಕೆ ಹಂಚಿಕೆ ಮಾಡಿರುವ ಆಹಾರ ಧಾನ್ಯಗಳ ಪ್ರಮಾಣವು, ಸಾಮಾನ್ಯ ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಆ ರಾಜ್ಯವು ಪಡೆದುಕೊಂಡಿರುವ ಆಹಾರ ಧಾನ್ಯಗಳ ವಾರ್ಷಿಕ ಸರಾಸರಿಗಿಂತ ಕಡಿಮೆಯಿದ್ದರೆ, ಕೊರತೆ ಬಿದ್ದ ಆಹಾರ ಧಾನ್ಯಗಳನ್ನು, ಕೇಂದ್ರ ಸರ್ಕಾರವು ನಿರ್ಧರಿಸಬಹುದಾದ ಬೆಲೆಗಳಲ್ಲಿ ಕಾಪಾಡತಕ್ಕದ್ದು ಮತ್ತು ಅನುಸೂಚಿ – IV ರಲ್ಲಿ ನಿರ್ದಿಷ್ಟಪಡಿಸಿದಂತೆ ಆ ರಾಜ್ಯಕ್ಕೆ ಆಹಾರ ಧಾನ್ಯಗಳನ್ನು ಹಂಚಿಕೆ ಮಾಡತಕ್ಕದ್ದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ "ಅಂತ್ಯೋದಯ ಅನ್ನ ಯೋಜನೆ" ಎಂದರೆ, 2000ದ ಡಿಸೆಂಬರ್ 25ನೇ ದಿನದಂದು ಕೇಂದ್ರ ಸರ್ಕಾರವು ಆ ಹೆಸರಿನಲ್ಲಿ ಪ್ರಾರಂಭಿಸಿದ ಮತ್ತು ಕಾಲಕಾಲಕ್ಕೆ ಮಾರ್ಪಾಡು ಮಾಡಿದ ಕಾರ್ಯ ಯೋಜನೆ.

(2) ಉಪಪ್ರಕರಣ (1)ರಲ್ಲಿ ತಿಳಿಸಿದ, ಅರ್ಹ ಕುಟುಂಬಗಳಿಗೆ ಸೇರಿದ ವ್ಯಕ್ತಿಗಳು ರಿಯಾಯಿತಿ ಬೆಲೆಗಳಲ್ಲಿ ಆಹಾರ ಧಾನ್ಯಗಳನ್ನು ಪಡೆಯಲು ಹೊಂದಿರುವ ಹಕ್ಕುದಾರಿಕೆಗಳನ್ನು, ಗ್ರಾಮೀಣ ಜನಸಂಖ್ಯೆಯ ಶೇಕಡಾ ಎಪ್ಪತ್ತೈದರಷ್ಟು ಜನರಿಗೆ ಮತ್ತು ನಗರದ ಜನಸಂಖ್ಯೆಯ ಶೇಕಡಾ ಐವತ್ತರಷ್ಟು ಜನರಿಗೆ ವಿಸ್ತರಿಸತಕ್ಕದ್ದು.

(3) ಅರ್ಹ ಕುಟುಂಬಗಳಿಗೆ ಸೇರಿದ ವ್ಯಕ್ತಿಗಳಿಗೆ, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಮಾರ್ಗಸೂಚಿಗಳಿಗೆ ಅನುಸಾರವಾಗಿ ಅಂಥ ವ್ಯಕ್ತಿಗಳು ಆಹಾರ ಧಾನ್ಯಗಳಲ್ಲಿ ಎಷ್ಟು ಪ್ರಮಾಣವನ್ನು ಪಡೆಯಲು ಹಕ್ಕುಳ್ಳವರಾಗಿದ್ದಾರೋ ಆ ಪ್ರಮಾಣಕ್ಕೆ ಬದಲಾಗಿ ರಾಜ್ಯ ಸರ್ಕಾರವು (1)ನೇ ಉಪಪ್ರಕರಣಕ್ಕೆ ಒಳಪಟ್ಟು ಗೋದಿ ಹಿಟ್ಟನ್ನು ಒದಗಿಸಬಹುದು.

**4. ಗರ್ಭಿಣಿ ಸ್ತ್ರೀಯರಿಗೆ ಮತ್ತು ಹಾಲುಣಿಸುವ ತಾಯಂದಿರಿಗೆ ಪೂರಕ ಪೌಷ್ಟಿಕಾಂಶ.–** ಕೇಂದ್ರ ಸರ್ಕಾರವು ರೂಪಿಸಬಹುದಾದಂಥ ಕಾರ್ಯ ಯೋಜನೆಗಳಿಗೆ ಒಳಪಟ್ಟು, ಪ್ರತಿಯೊಬ್ಬ ಗರ್ಭಿಣಿ ಸ್ತ್ರೀ ಮತ್ತು ಹಾಲುಣಿಸುವ ತಾಯಿಯು,–

(ಎ) ಅನುಸೂಚಿ–II ರಲ್ಲಿ ನಿರ್ದಿಷ್ಟಪಡಿಸಿದ ಪೌಷ್ಟಿಕಾಂಶ ಮಟ್ಟಗಳನ್ನು ಪೂರೈಸುವ ಹಾಗೆ ಸ್ಥಳೀಯ ಅಂಗನವಾಡಿಯ ಮೂಲಕ, ಗರ್ಭಿಣಿಯಾಗಿರುವ ಅವಧಿಯಲ್ಲಿ ಮತ್ತು ಹೆರಿಗೆಯ ನಂತರ ಆರು ತಿಂಗಳವರೆಗೆ ಉಚಿತವಾಗಿ ಊಟ ಪಡೆಯಲು; ಮತ್ತು

(ಬಿ) ಕೇಂದ್ರ ಸರ್ಕಾರವು ನಿಯಮಿಸಬಹುದಾದಷ್ಟು ಕಂತುಗಳಲ್ಲಿ, ಆರು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಹೆರಿಗೆ ಸೌಲಭ್ಯಕ್ಕೆ

– ಹಕ್ಕು ಹೊಂದಿರತಕ್ಕದ್ದು:

ಪರಂತು, ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಅಥವಾ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ನಿಯತ ಉದ್ಯೋಗದಲ್ಲಿರುವ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅಂಥವೇ ಪ್ರಯೋಜನಗಳನ್ನು ಪಡೆಯುತ್ತಿರುವ ಎಲ್ಲಾ ಗರ್ಭಿಣಿ ಸ್ತ್ರೀಯರು ಮತ್ತು ಹಾಲುಣಿಸುವ ತಾಯಂದಿರು (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿರುವ ಪ್ರಯೋಜನಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

**5. ಮಕ್ಕಳಿಗೆ ಪೂರಕ ಪೌಷ್ಟಿಕಾಂಶ.– (1)** (ಬಿ) ಖಂಡದಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಒಳಪಟ್ಟು, ಪ್ರತಿಯೊಂದು ಮಗುವು ಹದಿನಾಲ್ಕು ವರ್ಷಗಳ ವಯಸ್ಸಿನವರೆಗೆ ಅದರ ಪೌಷ್ಟಿಕಾಂಶದ ಅಗತ್ಯಗಳಿಗಾಗಿ ಈ ಮುಂದಿನವುಗಳನ್ನು ಪಡೆಯುವ ಹಕ್ಕುಗಾರಿಕೆಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಆರು ತಿಂಗಳಿನಿಂದ ಆರು ವರ್ಷಗಳವರೆಗಿನ ವಯೋಮಾನದ ಮಕ್ಕಳ ಸಂದರ್ಭದಲ್ಲಿ ಅನುಸೂಚಿ–II ರಲ್ಲಿ ನಿರ್ದಿಷ್ಟಪಡಿಸಿದ ಪೌಷ್ಟಿಕಾಂಶಗಳ ಮಟ್ಟಗಳನ್ನು ಪೂರೈಸುವ ಹಾಗೆ ಸ್ಥಳೀಯ ಅಂಗನವಾಡಿಯ ಮೂಲಕ ವಯಸ್ಸಿಗೆ ತಕ್ಕಷ್ಟು ಉಚಿತ ಊಟ:

ಪರಂತು, ಆರು ತಿಂಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ, ಮೊಲೆ ಹಾಲುಣಿಸುವುದನ್ನು ಮಾತ್ರವೇ ಪ್ರೋತ್ಸಾಹಿಸತಕ್ಕದ್ದು;

(ಬಿ) VIIIನೇ ತರಗತಿಯವರೆಗಿನ ಅಥವಾ ಆರರಿಂದ ಹದಿನಾಲ್ಕು ವರ್ಷಗಳ ವಯೋಮಾನದೊಳಗಿರುವ ಇವುಗಳಲ್ಲಿ ಯಾವುದು ಅನ್ವಯವಾಗುವುದೋ ಆ ಮಕ್ಕಳ ಸಂದರ್ಭದಲ್ಲಿ, ಅನುಸೂಚಿ–II ರಲ್ಲಿ ನಿರ್ದಿಷ್ಟಪಡಿಸಿರುವ ಪೌಷ್ಟಿಕಾಂಶ ಮಟ್ಟಗಳನ್ನು ಪೂರೈಸುವ ಹಾಗೆ, ಸ್ಥಳೀಯ ಸಂಸ್ಥೆಗಳು, ಸರ್ಕಾರವು ನಡೆಸುತ್ತಿರುವ ಎಲ್ಲಾ

ಶಾಲೆಗಳಲ್ಲಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ, ಶಾಲೆಯ ರಜಾ ದಿನಗಳನ್ನು ಹೊರತುಪಡಿಸಿ, ಪ್ರತಿದಿನ, ಉಚಿತವಾಗಿ ಮಧ್ಯಾಹ್ನದ ಬಿಸಿ ಊಟ.

(2) ಉಪಪ್ರಕರಣ(1)ರ (ಬಿ) ಖಂಡದಲ್ಲಿ ತಿಳಿಸಿರುವ ಪ್ರತಿಯೊಂದು ಶಾಲೆಯು ಮತ್ತು ಅಂಗನವಾಡಿಯು ಅಡುಗೆ ಮಾಡಲು, ಕುಡಿಯುವ ನೀರಿನ ಮತ್ತು ನೈರ್ಮಲ್ಯದ ಸೌಲಭ್ಯಗಳನ್ನು ಹೊಂದಿರತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು ಹೊರಡಿಸಿದ ಮಾರ್ಗಸೂಚಿಗಳ ಅನ್ವಯ, ನಗರ ಪ್ರದೇಶಗಳಲ್ಲಿ, ಅಗತ್ಯವಿರುವೆಡೆಗಳಲ್ಲಿ, ಅಡುಗೆ ಮಾಡಲು ಕೇಂದ್ರೀಕೃತ ಅಡುಗೆ ಮನೆ ಸೌಲಭ್ಯಗಳನ್ನು ಬಳಸಿಕೊಳ್ಳಬಹುದು.

6. **ಮಗುವಿನಲ್ಲಿ ಅಪೌಷ್ಟಿಕತೆಯನ್ನು ತಡೆಗಟ್ಟುವುದು ಮತ್ತು ಅದರ ನಿಭಾವಣೆ.**– ರಾಜ್ಯ ಸರ್ಕಾರವು, ಸ್ಥಳೀಯ ಅಂಗನವಾಡಿಯ ಮೂಲಕ, ಅನುಸೂಚಿ–II ರಲ್ಲಿ ನಿಗದಿಪಡಿಸಿರುವ ಪೌಷ್ಟಿಕಾಂಶದ ಮಟ್ಟಗಳನ್ನು ಪೂರೈಸುವ ಹಾಗೆ, ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳನ್ನು ಗುರುತಿಸಿ ಅವರಿಗೆ ಉಚಿತವಾಗಿ ಊಟವನ್ನು ಒದಗಿಸತಕ್ಕದ್ದು.

7. **ಹಕ್ಕುಗಾರಿಕೆಗಳು ಕೈಗೂಡುವಂತೆ ಮಾಡಲು ಕಾರ್ಯಯೋಜನೆಗಳ ಅನುಷ್ಠಾನ.**–ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ನಡುವೆ ವೆಚ್ಚವನ್ನು ಭಾಗ ಮಾಡಿಕೊಳ್ಳುವುದೂ ಒಳಗೊಂಡಂತೆ, ಮಾರ್ಗಸೂಚಿಗಳಿಗೆ ಅನುಸಾರವಾಗಿ 4ನೇ, 5ನೇ ಮತ್ತು 6ನೇ ಪ್ರಕರಣಗಳ ಮೇರೆಗಿನ ಹಕ್ಕುಗಾರಿಕೆಗಳನ್ನು ಒಳಗೊಳ್ಳುವ ಕಾರ್ಯಯೋಜನೆಗಳನ್ನು ರಾಜ್ಯ ಸರ್ಕಾರವು ಅನುಷ್ಠಾನಗೊಳಿಸತಕ್ಕದ್ದು.

## ಅಧ್ಯಾಯ –III
## ಆಹಾರ ಭದ್ರತೆ ಭತ್ಯೆ

8. **ಕೆಲವು ಪ್ರಕರಣಗಳಲ್ಲಿ ಆಹಾರ ಭದ್ರತೆ ಭತ್ಯೆಯನ್ನು ಪಡೆಯಲು ಹಕ್ಕು.**– ಅಧ್ಯಾಯ–II ರ ಮೇರೆಗೆ ಹಕ್ಕುಳ್ಳ ವ್ಯಕ್ತಿಗಳಿಗೆ ಪಡೆಯಲು ಹಕ್ಕಿರುವಷ್ಟು ಪ್ರಮಾಣದ ಆಹಾರ ಧಾನ್ಯಗಳನ್ನು ಮತ್ತು ಊಟವನ್ನು ಪೂರೈಸದಿರುವ ಸಂದರ್ಭದಲ್ಲಿ, ಅಂಥ ವ್ಯಕ್ತಿಯು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ರೀತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಸಂದಾಯ ಮಾಡಲಾಗುವ ಆಹಾರ ಭದ್ರತೆ ಭತ್ಯೆಯನ್ನು ರಾಜ್ಯ ಸರ್ಕಾರದಿಂದ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

## ಅಧ್ಯಾಯ –IV
## ಅರ್ಹ ಕುಟುಂಬಗಳನ್ನು ಗುರುತಿಸುವುದು

9. **ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ವ್ಯಾಪ್ತಿಗೆ ಒಳಪಡುವ ಜನಸಂಖ್ಯೆ.**– ಪ್ರತಿಯೊಂದು ರಾಜ್ಯಕ್ಕೆ ಅನ್ವಯಿಸಿದಂತೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ವ್ಯಾಪ್ತಿಗೆ ಒಳಪಡುವ ಜನರ ಶೇಕಡಾ ಪ್ರಮಾಣವನ್ನು, 3ನೇ ಪ್ರಕರಣದ (2)ನೇ ಉಪಪ್ರಕರಣಕ್ಕೆ ಒಳಪಟ್ಟು, ಕೇಂದ್ರ ಸರ್ಕಾರವು ನಿರ್ಧರಿಸತಕ್ಕದ್ದು ಮತ್ತು ಆ ರಾಜ್ಯದ ಅಂಥ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಈ ವ್ಯವಸ್ಥೆಯ ವ್ಯಾಪ್ತಿಗೆ ಒಳಪಡುವಂಥ ವ್ಯಕ್ತಿಗಳ ಒಟ್ಟು ಸಂಖ್ಯೆಯನ್ನು, ಯಾವ ಜನಗಣತಿಯ ಸಂಬಂಧಪಟ್ಟ ಅಂಕಿಅಂಶಗಳನ್ನು ಪ್ರಕಟಿಸಲಾಗಿದೆಯೋ ಆ ಜನಗಣತಿಯ ಪ್ರಕಾರ ಜನಸಂಖ್ಯೆಯ ಅಂದಾಜುಗಳ ಆಧಾರದ ಮೇಲೆ ಲೆಕ್ಕಹಾಕತಕ್ಕದ್ದು.

10. **ರಾಜ್ಯ ಸರ್ಕಾರವು ಮಾರ್ಗಸೂಚಿಗಳನ್ನು ಸಿದ್ಧಪಡಿಸುವುದು ಮತ್ತು ಆದ್ಯತಾ ಕುಟುಂಬಗಳನ್ನು ಗುರುತಿಸುವುದು.**– (1) ರಾಜ್ಯ ಸರ್ಕಾರವು, ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ, 9ನೇ ಪ್ರಕರಣದ ಮೇರೆಗೆ ನಿರ್ಧರಿಸಿದ ವ್ಯಕ್ತಿಗಳ ಸಂಖ್ಯೆಯೊಳಗೆ,–

(ಎ) ಅಂತ್ಯೋದಯ ಅನ್ನ ಯೋಜನೆಗೆ ಅನ್ವಯವಾಗುವ ಮಾರ್ಗಸೂಚಿಗಳಿಗೆ ಅನುಸಾರವಾಗಿ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿರುವಷ್ಟರ ಮಟ್ಟಿಗೆ ಆ ಯೋಜನೆಯ ವ್ಯಾಪ್ತಿಗೆ ಒಳಪಡುವಂಥ ಕುಟುಂಬಗಳನ್ನು;

(ಬಿ) ಇನ್ನುಳಿದ ಕುಟುಂಬಗಳನ್ನು, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಮಾರ್ಗಸೂಚಿಗಳಿಗೆ ಅನುಸಾರವಾಗಿ ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ವ್ಯಾಪ್ತಿಗೆ ಒಳಪಡುವಂಥ ಆದ್ಯತಾ ಕುಟುಂಬಗಳನ್ನು

– ಗುರುತಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು ಆದಷ್ಟು ಬೇಗನೆ ಆದರೆ ಈ ಅಧಿನಿಯಮವು ಪ್ರಾರಂಭವಾದಂದಿನಿಂದ ಮುನ್ನೂರ ಅರವತ್ತೈದು ದಿನಗಳನ್ನು ಮೀರದಂಥ ಅವಧಿಯೊಳಗೆ, ಈ ಉಪಪ್ರಕರಣದ ಮೇರೆಗೆ ರೂಪಿಸಿದ ಮಾರ್ಗಸೂಚಿಗಳಿಗೆ ಅನುಸಾರವಾಗಿ ಅರ್ಹ ಕುಟುಂಬಗಳನ್ನು ಗುರುತಿಸತಕ್ಕದ್ದು:

ಮತ್ತು ಪರಂತು, ರಾಜ್ಯ ಸರ್ಕಾರವು, ಅಂಥ ಕುಟುಂಬಗಳನ್ನು ಗುರುತಿಸುವ ಕಾರ್ಯವು ಮುಕ್ತಾಯವಾಗುವವರೆಗೆ ಹಾಲಿ ಇರುವ ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ಆಹಾರ ಧಾನ್ಯಗಳ ಹಂಚಿಕೆಯನ್ನು ಕೇಂದ್ರ ಸರ್ಕಾರದಿಂದ ಪಡೆಯುವುದು ಮುಂದುವರೆಯತಕ್ಕದ್ದು.

(2) ರಾಜ್ಯ ಸರ್ಕಾರವು ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಅನ್ವಯಿಸಿದಂತೆ 9ನೇ ಪ್ರಕರಣದ ಮೇರೆಗೆ ನಿರ್ಧರಿಸಲಾದ ವ್ಯಕ್ತಿಗಳ ಸಂಖ್ಯೆಯೊಳಗೆ ಅರ್ಹ ಕುಟುಂಬಗಳ ಪಟ್ಟಿಯನ್ನು, (1)ನೇ ಉಪಪ್ರಕರಣದ ಮೇರೆಗೆ ರೂಪಿಸಿದ ಮಾರ್ಗಸೂಚಿಗಳಿಗೆ ಅನುಸಾರವಾಗಿ ತಹಲ್‌ವರೆಗೆ ಸಿದ್ಧಪಡಿಸತಕ್ಕದ್ದು.

**11. ಅರ್ಹ ಕುಟುಂಬಗಳ ಪಟ್ಟಿಯನ್ನು ಪ್ರಕಟಿಸುವುದು ಮತ್ತು ಪ್ರದರ್ಶಿಸುವುದು.**– ರಾಜ್ಯ ಸರ್ಕಾರವು, ಗುರುತಿಸಿದ ಅರ್ಹ ಕುಟುಂಬಗಳ ಪಟ್ಟಿಯನ್ನು ಸಾರ್ವಜನಿಕರಿಗೆ ಲಭ್ಯವಾಗುವ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಎದ್ದು ಕಾಣುವಂತೆ ಪ್ರದರ್ಶಿಸತಕ್ಕದ್ದು.

## ಅಧ್ಯಾಯ –V

## ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಸುಧಾರಣೆ

**12. ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಸುಧಾರಣೆ.**–(1) ಈ ಅಧಿನಿಯಮದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಗೊತ್ತುಪಡಿಸಿದ ಪಾತ್ರಕ್ಕೆ ಅನುಗುಣವಾಗಿ ಆ ಸರ್ಕಾರಗಳು ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಅವಶ್ಯಕವಾದ ಸುಧಾರಣೆಗಳನ್ನು ಹಂತಹಂತವಾಗಿ ತರಲು ಪ್ರಯತ್ನಿಸತಕ್ಕದ್ದು.

(2) ಆ ಸುಧಾರಣೆಗಳು ಇತರ ವಿಷಯಗಳ ಜೊತೆಗೆ ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು.

(ಎ) ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮಳಿಗೆಗಳ ಬಾಗಿಲಿಗೆ ಆಹಾರ ಧಾನ್ಯಗಳನ್ನು ಒಯ್ದು ವಿತರಿಸುವುದು;

(ಬಿ) ವ್ಯವಹಾರಗಳನ್ನು ಎಲ್ಲಾ ಹಂತಗಳಲ್ಲಿ ಪಾರದರ್ಶಕವಾಗಿ ದಾಖಲಿಸುವುದನ್ನು ಖಾತರಿಪಡಿಸುವ ಮತ್ತು ಪಡಿತರವನ್ನು ಬೇರೆ ಉದ್ದೇಶಗಳಿಗೆ ಮಾರ್ಗಾಂತರಿಸುವುದನ್ನು ತಪ್ಪಿಸುವ ಸಲುವಾಗಿ ಪೂರ್ಣವಾಗಿ ಗಣಕೀಕೃತಗೊಳಿಸುವುದೂ ಒಳಗೊಂಡಂತೆ ಮಾಹಿತಿ ಮತ್ತು ಸಂಪರ್ಕ ತಾಂತ್ರಿಕತೆ ವಿಧಾನಗಳನ್ನು ಅಳವಡಿಸಿಕೊಳ್ಳುವುದು;

(ಸಿ) ಈ ಅಧಿನಿಯಮದ ಮೇರೆಗೆ ಫಲಾನುಭವಿಗಳನ್ನು ಸರಿಯಾಗಿ ಗುರುತಿಸುವುದಕ್ಕಾಗಿ ಅರ್ಹ ಫಲಾನುಭವಿಗಳ ಬಯೋಮೆಟ್ರಿಕ್ ಮಾಹಿತಿಯೊಂದಿಗೆ ವಿಶಿಷ್ಟ ಗುರುತಿಗಾಗಿ "ಆಧಾರ್" ಕಾರ್ಡ್‌ನ್ನು ಒಂದು ಸಾಧನವಾಗಿ ಬಳಸಿಕೊಳ್ಳುವುದು;

(ಡಿ) ದಾಖಲೆಗಳು ಸಂಪೂರ್ಣವಾಗಿ ಪಾರದರ್ಶಕವಾಗಿರುವುದು ;

(ಇ) ನ್ಯಾಯಬೆಲೆ ಅಂಗಡಿಗಳ ಲೈಸನ್ಸ್‌ನ್ನು ನೀಡುವಾಗ ಪಂಚಾಯತಿಗಳು, ಸ್ವಸಹಾಯ ಗುಂಪುಗಳು, ಸಹಕಾರ ಸಂಘಗಳಂಥ ಸಾರ್ವಜನಿಕ ಸಂಸ್ಥೆಗಳಿಗೆ ಅಥವಾ ಸಾರ್ವಜನಿಕ ನಿಕಾಯಗಳಿಗೆ ಆದ್ಯತೆ ನೀಡುವುದು ಮತ್ತು ಮಹಿಳೆಯರು ಅಥವಾ ಮಹಿಳೆಯರ ಸಮೂಹಗಳು ನ್ಯಾಯಬೆಲೆ ಅಂಗಡಿಗಳನ್ನು ನಡೆಸುವುದಕ್ಕೆ ಆದ್ಯತೆ ನೀಡುವುದು;

(ಎಫ್) ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ವಿತರಣೆ ಮಾಡುವ ಸರಕುಗಳಿಗೆ ಕಾಲಾನುಕ್ರಮದಲ್ಲಿ ಇನ್ನಷ್ಟು ಸರಕುಗಳನ್ನು ಸೇರಿಸುವುದು;

(ಜಿ) ಸ್ಥಳೀಯ ಸಾರ್ವಜನಿಕ ವಿತರಣಾ ವ್ಯವಸ್ಥೆಗಳಿಗೆ ಮತ್ತು ಧಾನ್ಯ ಬ್ಯಾಂಕುಗಳಿಗೆ ಬೆಂಬಲ ನೀಡುವುದು;

(ಹೆಚ್) ಅಧ್ಯಾಯ–II ರಲ್ಲಿ ನಿರ್ದಿಷ್ಟಪಡಿಸಿದ ಆಹಾರ ಧಾನ್ಯಗಳನ್ನು ಪಡೆಯಲು ಉದ್ದೇಶಿತ ಫಲಾನುಭವಿಗಳಿಗೆ ಇರುವ ಹಕ್ಕುಗಳನ್ನು ಖಾತರಿಪಡಿಸುವುದಕ್ಕಾಗಿ ಅವರಿಗೆ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಪ್ರದೇಶದಲ್ಲಿ ಮತ್ತು ರೀತಿಯಲ್ಲಿ, ನಗದು ವರ್ಗಾವಣೆ, ಆಹಾರ ಕೂಪನ್‌ಗಳು ಅಥವಾ ಅಂಥ ಇತರ ಕಾರ್ಯಯೋಜನೆಗಳನ್ನು ಪ್ರಾರಂಭಿಸುವುದು.

## ಅಧ್ಯಾಯ – VI

## ಮಹಿಳಾ ಸಬಲೀಕರಣ

**13. ಪಡಿತರ ಚೀಟಿಯನ್ನು ನೀಡುವ ಉದ್ದೇಶಕ್ಕಾಗಿ ಹದಿನೆಂಟು ವರ್ಷ ಅಥವಾ ಅದಕ್ಕೂ ಹೆಚ್ಚು ವಯಸ್ಸಿನ ಮಹಿಳೆಯು ಕುಟುಂಬದ ಮುಖ್ಯಸ್ಥೆಯಾಗಿರುವುದು.**– (1) ಪಡಿತರ ಚೀಟಿಗಳನ್ನು ನೀಡುವ ಉದ್ದೇಶಕ್ಕಾಗಿ ಪ್ರತಿಯೊಂದು ಅರ್ಹ ಕುಟುಂಬದಲ್ಲಿನ ಹದಿನೆಂಟು ವರ್ಷಗಳಿಗಿಂತ ಕಡಿಮೆಯಲ್ಲದ ವಯಸ್ಸಿನ ಹಿರಿಯ ಮಹಿಳೆಯು, ಕುಟುಂಬದ ಮುಖ್ಯಸ್ಥೆಯಾಗಿರತಕ್ಕದ್ದು.

(2) ಕುಟುಂಬದಲ್ಲಿ ಮಹಿಳೆಯು ಅಥವಾ ಹದಿನೆಂಟು ವರ್ಷದ ಅಥವಾ ಅದಕ್ಕಿಂತ ಮೇಲ್ಪಟ್ಟ ವಯಸ್ಸಿನ ಮಹಿಳೆಯು ಯಾವುದೇ ಕಾಲದಲ್ಲಿ ಇಲ್ಲದಿದ್ದಾಗ, ಆದರೆ ಆ ಕುಟುಂಬದಲ್ಲಿ, ಹದಿನೆಂಟು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಹಿಳೆಯು ಇದ್ದರೆ, ಆಗ ಪಡಿತರ ಚೀಟಿಯನ್ನು ನೀಡುವ ಉದ್ದೇಶಕ್ಕಾಗಿ ಆ ಕುಟುಂಬದಲ್ಲಿಯ ಅತ್ಯಂತ ಹಿರಿಯ ಪುರುಷ ವ್ಯಕ್ತಿಯು ಆ ಕುಟುಂಬದ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಹದಿನೆಂಟು ವರ್ಷ ತುಂಬಿರದಿದ್ದ ಮಹಿಳೆಗೆ ಹದಿನೆಂಟು ವರ್ಷ ವಯಸ್ಸು ತುಂಬಿದ ಮೇಲೆ ಅಂಥ ಪಡಿತರ ಚೀಟಿಯ ಉದ್ದೇಶಕ್ಕಾಗಿ ಅಂಥ ಪುರುಷ ವ್ಯಕ್ತಿಯ ಬದಲಿಗೆ ಆಕೆಯು ಕುಟುಂಬದ ಮುಖ್ಯಸ್ಥಳಾಗತಕ್ಕದ್ದು.

## ಅಧ್ಯಾಯ – VII

## ಕುಂದುಕೊರತೆಗಳ ನಿವಾರಣಾ ವ್ಯವಸ್ಥೆ

**14. ಕುಂದುಕೊರತೆಗಳ ನಿವಾರಣೆಗೆ ಆಂತರಿಕ ವ್ಯವಸ್ಥೆ.–** ಪ್ರತಿಯೊಂದು ರಾಜ್ಯ ಸರ್ಕಾರವು ಕುಂದುಕೊರತೆಗಳ ನಿವಾರಣೆಗೆ ಆಂತರಿಕ ವ್ಯವಸ್ಥೆಯನ್ನು ಜಾರಿಗೆ ತರತಕ್ಕದ್ದು, ಅದರಲ್ಲಿ, ಕಾಲ್ ಸೆಂಟರ್‌ಗಳು, ಹೆಲ್ಪ್ ಲೈನ್‌ಗಳು, ನೋಡಲ್ ಅಧಿಕಾರಿಗಳು ಅಥವಾ ನಿಯಮಿಸಬಹುದಾದಂಥ ಇತರ ವ್ಯವಸ್ಥೆಯು ಒಳಗೊಂಡಿರಬಹುದು.

**15. ಜಿಲ್ಲಾ ಕುಂದುಕೊರತೆಗಳ ನಿವಾರಣಾಧಿಕಾರಿ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಅಧ್ಯಾಯ–II ರ ಮೇರೆಗೆ ಪಡೆಯಲು ಹಕ್ಕುಳ್ಳ ಆಹಾರಧಾನ್ಯಗಳ ಅಥವಾ ಊಟದ ವಿತರಣೆಗೆ ಮತ್ತು ಈ ಅಧಿನಿಯಮದ ಮೇರೆಗೆ ಹಕ್ಕುಗಳನ್ನು ಜಾರಿಗೊಳಿಸುವುದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ, ಬಾಧಿತ ವ್ಯಕ್ತಿಗಳ ಕುಂದುಕೊರತೆಗಳ ತ್ವರಿತ ಮತ್ತು ಪರಿಣಾಮಕಾರಿ ನಿವಾರಣೆಗಾಗಿ ಪ್ರತಿಯೊಂದು ಜಿಲ್ಲೆಗೆ ಒಬ್ಬ ಜಿಲ್ಲಾ ಕುಂದುಕೊರತೆಗಳ ನಿವಾರಣಾಧಿಕಾರಿಯನ್ನು ಗೊತ್ತುಪಡಿಸತಕ್ಕದ್ದು ಅಥವಾ ನೇಮಿಸತಕ್ಕದ್ದು.

(2) ಜಿಲ್ಲಾ ಕುಂದುಕೊರತೆಗಳ ನಿವಾರಣಾಧಿಕಾರಿಯಾಗಿ ನೇಮಕಗೊಳ್ಳುವುದಕ್ಕೆ ಇರಬೇಕಾದ ಅರ್ಹತೆಗಳು ಮತ್ತು ಅವನ ಅಧಿಕಾರಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಜಿಲ್ಲಾ ಕುಂದುಕೊರತೆಗಳ ನಿವಾರಣಾಧಿಕಾರಿಯ ನೇಮಕದ ವಿಧಾನವು ಮತ್ತು ನಿಬಂಧನೆಗಳು ಮತ್ತು ಷರತ್ತುಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಜಿಲ್ಲಾ ಕುಂದುಕೊರತೆಗಳ ನಿವಾರಣಾಧಿಕಾರಿಯ ಮತ್ತು ಇತರ ಸಿಬ್ಬಂದಿಯ ಸಂಬಳ ಮತ್ತು ಭತ್ಯೆಗಳಿಗೆ ಹಾಗೂ ಅವರು ಸಮರ್ಪಕವಾಗಿ ಕಾರ್ಯನಿರ್ವಹಿಸುವುದಕ್ಕೆ ಅವಶ್ಯಕವಾಗಿದೆಯೆಂದು ಪರಿಗಣಿಸಬಹುದಾದಂಥ ಇತರ ವೆಚ್ಚಗಳಿಗೆ ರಾಜ್ಯ ಸರ್ಕಾರವು ಉಪಬಂಧ ಕಲ್ಪಿಸತಕ್ಕದ್ದು.

(5) ಉಪಪ್ರಕರಣ (1)ರಲ್ಲಿ ತಿಳಿಸಿದ ಅಧಿಕಾರಿಯು, ಹಕ್ಕಿನ ಆಹಾರ ಧಾನ್ಯಗಳನ್ನು ಅಥವಾ ಊಟವನ್ನು ವಿತರಿಸುವುದಕ್ಕೆ ಸಂಬಂಧಿಸಿದ ದೂರುಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ವಿಚಾರಣೆ ಮಾಡತಕ್ಕದ್ದು ಮತ್ತು ಅವುಗಳನ್ನು ಪರಿಹರಿಸುವುದಕ್ಕಾಗಿ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲದೊಳಗೆ ಅವಶ್ಯವಾದ ಕ್ರಮ ಕೈಗೊಳ್ಳತಕ್ಕದ್ದು.

(6) ಉಪಪ್ರಕರಣ (1)ರಲ್ಲಿ ತಿಳಿಸಿರುವ ಅಧಿಕಾರಿಯು ಯಾವ ದೂರುದಾರನ ಅಥವಾ ಅಧಿಕಾರಿಯ ಅಥವಾ ಪ್ರಾಧಿಕಾರದ ವಿರುದ್ಧ ಆದೇಶ ಹೊರಡಿಸಿರುವನೋ ಆ ಯಾವುದೇ ದೂರುದಾರನಿಗೆ ಅಥವಾ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಕುಂದುಕೊರತೆಗಳ ನಿವಾರಣೆ ಬಗ್ಗೆ ತೃಪ್ತಿಯಾಗದಿದ್ದರೆ, ಆ ದೂರುದಾರನು ಅಥವಾ ಅಧಿಕಾರಿಯು ಅಥವಾ ಪ್ರಾಧಿಕಾರವು ಅಂಥ ಆದೇಶದ ವಿರುದ್ಧ ರಾಜ್ಯ ಆಯೋಗಕ್ಕೆ ಅಪೀಲನ್ನು ಸಲ್ಲಿಸಬಹುದು.

(7) ಉಪಪ್ರಕರಣ (6)ರ ಮೇರೆಗೆ ಸಲ್ಲಿಸುವ ಪ್ರತಿಯೊಂದು ಅಪೀಲನ್ನು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲದೊಳಗೆ ಸಲ್ಲಿಸತಕ್ಕದ್ದು.

**16. ರಾಜ್ಯ ಆಹಾರ ಆಯೋಗ.–** (1) ಪ್ರತಿಯೊಂದು ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇಲ್ವಿಚಾರಣೆಯ ಮತ್ತು ಅನುಷ್ಠಾನದ ಪುನರವಲೋಕನದ ಉದ್ದೇಶಕ್ಕಾಗಿ ರಾಜ್ಯ ಆಹಾರ ಆಯೋಗವನ್ನು ಅಧಿಸೂಚನೆಯ ಮೂಲಕ ರಚಿಸತಕ್ಕದ್ದು.

(2) ರಾಜ್ಯ ಆಯೋಗದಲ್ಲಿ ಈ ಮುಂದಿನವರು ಇರತಕ್ಕದ್ದು,–

(ಎ) ಅಧ್ಯಕ್ಷ;

(ಬಿ) ಇತರ ಐವರು ಸದಸ್ಯರು; ಮತ್ತು

(ಸಿ) ಸದಸ್ಯ – ಕಾರ್ಯದರ್ಶಿ, ಇವನು ರಾಜ್ಯ ಸರ್ಕಾರದ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ರಾಜ್ಯ ಸರ್ಕಾರದ ಅಧಿಕಾರಿಯಾಗಿರತಕ್ಕದ್ದು:

ಪರಂತು, ಕನಿಷ್ಠ ಇಬ್ಬರು ಮಹಿಳೆಯರು ಇರತಕ್ಕದ್ದು, ಅವರು ಅಧ್ಯಕ್ಷರಾಗಿರಬಹುದು, ಸದಸ್ಯರಾಗಿರಬಹುದು ಅಥವಾ ಸದಸ್ಯ–ಕಾರ್ಯದರ್ಶಿಯಾಗಿರಬಹುದು:

ಮತ್ತು ಪರಂತು, ಅನುಸೂಚಿತ ಜಾತಿಗೆ ಸೇರಿದ ಒಬ್ಬ ವ್ಯಕ್ತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಒಬ್ಬ ವ್ಯಕ್ತಿ ಇರತಕ್ಕದ್ದು, ಅವನು ಅಧ್ಯಕ್ಷನಾಗಿರಬಹುದು, ಸದಸ್ಯನಾಗಿರಬಹುದು ಅಥವಾ ಸದಸ್ಯ–ಕಾರ್ಯದರ್ಶಿಯಾಗಿರಬಹುದು.

(3) ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು,–

(ಎ) ಅಖಿಲ ಭಾರತ ಸೇವೆಗಳಿಗೆ ಅಥವಾ ಕೇಂದ್ರದ ಅಥವಾ ರಾಜ್ಯದ ಯಾವುದೇ ಇತರ ಸಿವಿಲ್ ಸೇವೆಗಳಿಗೆ ಸೇರಿದ ಸದಸ್ಯನಾಗಿರುವ ಅಥವಾ ಸದಸ್ಯನಾಗಿದ್ದ ಅಥವಾ ಆಹಾರ ಭದ್ರತೆ, ಕೃಷಿ, ನಾಗರಿಕ ಸರಬರಾಜು, ಪೌಷ್ಟಿಕಾಂಶ, ಆರೋಗ್ಯ ಕ್ಷೇತ್ರದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಕ್ಷೇತ್ರದಲ್ಲಿ ಕಾರ್ಯನೀತಿಗಳನ್ನು ರೂಪಿಸುವುದು ಮತ್ತು ಆಡಳಿತ ನಿರ್ವಹಣೆಗೆ ಸಂಬಂಧಿಸಿದ ವಿಷಯಗಳಲ್ಲಿ ಜ್ಞಾನವನ್ನು ಮತ್ತು ಅನುಭವವನ್ನು ಹೊಂದಿರುವ, ಕೇಂದ್ರದ ಅಥವಾ ರಾಜ್ಯದ ಅಧೀನದಲ್ಲಿ ಸಿವಿಲ್ ಹುದ್ದೆಯನ್ನು ಧಾರಣ ಮಾಡಿರುವ; ಅಥವಾ

(ಬಿ) ಕೃಷಿ, ಕಾನೂನು, ಮಾನವ ಹಕ್ಕುಗಳು, ಸಮಾಜ ಸೇವೆ, ವ್ಯವಸ್ಥಾಪನೆ, ಪೌಷ್ಟಿಕಾಂಶ, ಆರೋಗ್ಯ, ಆಹಾರ ಕಾರ್ಯನೀತಿ ಅಥವಾ ಸಾರ್ವಜನಿಕ ಆಡಳಿತ, ಇವುಗಳಲ್ಲಿ ಅಪಾರವಾದ ಜ್ಞಾನವನ್ನು ಮತ್ತು ಅನುಭವವನ್ನು ಹೊಂದಿರುವ ಸಾರ್ವಜನಿಕ ಜೀವನದಲ್ಲಿ ಪ್ರಸಿದ್ಧರಾಗಿರುವ; ಅಥವಾ

(ಸಿ) ಬಡವರ ಆಹಾರ ಮತ್ತು ಪೌಷ್ಟಿಕಾಂಶ ಹಕ್ಕುಗಳ ಸುಧಾರಣೆಗೆ ಸಂಬಂಧಿಸಿದಂತೆ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ದಾಖಲೆಯನ್ನು ಹೊಂದಿರುವ ವ್ಯಕ್ತಿಗಳ ಪೈಕಿಯಿಂದ

– ನೇಮಕ ಮಾಡತಕ್ಕದ್ದು.

(4) ಅಧ್ಯಕ್ಷನು ಮತ್ತು ಪ್ರತಿಯೊಬ್ಬ ಇತರ ಸದಸ್ಯನು ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳಿಗೆ ಮೀರದಂಥ ಅವಧಿಗೆ ಪದಧಾರಣ ಮಾಡತಕ್ಕದ್ದು ಮತ್ತು ಮರುನೇಮಕಕ್ಕೆ ಅರ್ಹನಾಗತಕ್ಕದ್ದು:

ಪರಂತು, ಯಾರೇ ವ್ಯಕ್ತಿಯು ತನಗೆ ಅರವತ್ತೈದು ವರ್ಷ ವಯಸ್ಸು ತುಂಬಿದ ತರುವಾಯ ಅಧ್ಯಕ್ಷನಾಗಿ ಅಥವಾ ಇತರ ಸದಸ್ಯನಾಗಿ ಪದಧಾರಣ ಮಾಡತಕ್ಕದ್ದಲ್ಲ.

(5) ರಾಜ್ಯ ಆಯೋಗದ ಅಧ್ಯಕ್ಷನ, ಇತರ ಸದಸ್ಯರ ಮತ್ತು ಸದಸ್ಯ–ಕಾರ್ಯದರ್ಶಿಯ ನೇಮಕದ ವಿಧಾನ ಮತ್ತು ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಅವರನ್ನು ನೇಮಕ ಮಾಡಬಹುದೋ ಆ ಇತರ ನಿಬಂಧನೆಗಳು ಮತ್ತು ಷರತ್ತುಗಳು, ಮತ್ತು ರಾಜ್ಯ ಆಯೋಗವು ಸಭೆಗಳನ್ನು ನಡೆಸುವ ಕಾಲ, ಸ್ಥಳ ಮತ್ತು ಸಭೆಗಳ ಕಾರ್ಯವಿಧಾನವು (ಅಂಥ ಸಭೆಗಳಲ್ಲಿ ಇರಬೇಕಾದ ಕೋರಂ ಸೇರಿದಂತೆ) ಮತ್ತು ಅದರ ಅಧಿಕಾರಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

(6) ರಾಜ್ಯ ಆಯೋಗವು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ರಾಜ್ಯಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ;

(ಬಿ) ಅಧ್ಯಾಯ–IIರಲ್ಲಿ ತಿಳಿಸಿರುವ ಹಕ್ಕುಗಳ ಉಲ್ಲಂಘನೆಗಳ ಬಗ್ಗೆ ಸ್ವಯಿಚ್ಛೆಯಿಂದಲಾಗಲಿ ಅಥವಾ ದೂರನ್ನು ಸ್ವೀಕರಿಸಿದ ಮೇಲೆಯಾಗಲಿ ವಿಚಾರಣೆ ನಡೆಸುವುದು;

(ಸಿ) ಈ ಅಧಿನಿಯಮದ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು;

(ಡಿ) ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರುವ ವ್ಯಕ್ತಿಗಳ ಹಕ್ಕುಗಳನ್ನು ಸಂಪೂರ್ಣವಾಗಿ ಅನುಭವಿಸುವುದಕ್ಕೆ ಅವರಿಗೆ ಸಾಧ್ಯವಾಗುವಂತೆ ಮಾಡಲು ಆಹಾರ ಮತ್ತು ಪೌಷ್ಟಿಕಾಂಶ ಸಂಬಂಧಿತ ಕಾರ್ಯಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರಕ್ಕೆ, ಅದರ ಏಜೆನ್ಸಿಗಳಿಗೆ, ಸ್ವಾಯತ್ತ ಸಂಸ್ಥೆಗಳಿಗೆ ಹಾಗೂ ಸಂಬಂಧಪಟ್ಟ ಸೇವೆಗಳನ್ನು ಒದಗಿಸಿರುವ ಕಾರ್ಯದಲ್ಲಿ ತೊಡಗಿರುವ ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಸಲಹೆ ನೀಡುವುದು;

(ಇ) ಜಿಲ್ಲಾ ಕುಂದುಕೊರತೆ ನಿವಾರಣಾಧಿಕಾರಿಯ ಆದೇಶದ ವಿರುದ್ಧ ಸಲ್ಲಿಸಲಾಗಿರುವ ಅಪೀಲುಗಳನ್ನು ವಿಚಾರಣೆ ಮಾಡುವುದು;

(ಎಫ್) ವಾರ್ಷಿಕ ವರದಿಯನ್ನು ಸಿದ್ಧಪಡಿಸುವುದು, ರಾಜ್ಯ ಸರ್ಕಾರವು ಅದನ್ನು ರಾಜ್ಯ ವಿಧಾನಮಂಡಲದ ಮುಂದೆ ಇಡುವುದು.

(7) ರಾಜ್ಯ ಆಯೋಗವು ಸಮರ್ಪಕವಾಗಿ ಕಾರ್ಯ ನಿರ್ವಹಿಸುವುದಕ್ಕೆ ಅವಶ್ಯವೆಂದು ರಾಜ್ಯ ಸರ್ಕಾರವು, ಪರಿಗಣಿಸಬಹುದಾದಂಥ ಆಡಳಿತ ಮತ್ತು ತಾಂತ್ರಿಕ ಸಿಬ್ಬಂದಿಯನ್ನು, ರಾಜ್ಯ ಸರ್ಕಾರವು ರಾಜ್ಯ ಆಯೋಗಕ್ಕೆ ಒದಗಿಸತಕ್ಕದ್ದು.

(8) ಉಪಪ್ರಕರಣ (7)ರ ಮೇರೆಗೆ ಸಿಬ್ಬಂದಿಯನ್ನು ನೇಮಕ ಮಾಡುವ ವಿಧಾನ, ಅವರ ಸಂಬಳ, ಭತ್ಯೆಗಳು ಮತ್ತು ಸೇವೆಯ ಷರತ್ತುಗಳು, ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

(9) ಅಧ್ಯಕ್ಷನು ಅಥವಾ ಯಾರೇ ಸದಸ್ಯನು, –

(ಎ) ದಿವಾಳಿಯಾಗಿದ್ದರೆ ಅಥವಾ ದಿವಾಳಿಯೆಂದು ಯಾವುದೇ ಕಾಲದಲ್ಲಿ ನ್ಯಾಯನಿರ್ಣೀತನಾಗಿದ್ದರೆ; ಅಥವಾ

(ಬಿ) ಸದಸ್ಯನಾಗಿ ಕಾರ್ಯ ನಿರ್ವಹಿಸಲು ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥನಾದರೆ; ಅಥವಾ

(ಸಿ) ನೈತಿಕ ಅಧಃಪತನವನ್ನೊಳಗೊಂಡ ಅಪರಾಧವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವಂಥ, ಅಪರಾಧದ ತಪ್ಪಿತಸ್ಥನಾಗಿದ್ದರೆ; ಅಥವಾ

(ಡಿ) ಸದಸ್ಯನಾಗಿ ತನ್ನ ಪ್ರಕಾರ್ಯಗಳ ನಿರ್ವಹಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವಂಥ ಆರ್ಥಿಕ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಇ) ಅವನು ತನ್ನ ಸ್ಥಾನವನ್ನು ಎಷ್ಟರ ಮಟ್ಟಿಗೆ ದುರುಪಯೋಗಪಡಿಸಿ ಕೊಂಡಿದ್ದಾನೆಂದರೆ, ಅವನನ್ನು ಮುಂದುವರಿಸಿದ್ದೇ ಆದರೆ, ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯುಂಟಾಗುಷ್ಟರ ಮಟ್ಟಿಗೆ ದುರುಪಯೋಗಪಡಿಸಿಕೊಂಡಿದ್ದರೆ

– ಅವನನ್ನು ರಾಜ್ಯ ಸರ್ಕಾರವು ಪದದಿಂದ ತೆಗೆದುಹಾಕಬಹುದು.

(10) ಅಂಥ ಯಾರೇ ಅಧ್ಯಕ್ಷನನ್ನು ಅಥವಾ ಸದಸ್ಯನನ್ನು ಪದದಿಂದ ತೆಗೆದುಹಾಕುವ ವಿಷಯದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವನಿಗೆ ಯುಕ್ತ ಅವಕಾಶವನ್ನು ನೀಡಿದ ಹೊರತು, ಅವನನ್ನು (9)ನೇ ಉಪ-ಪ್ರಕರಣದ (ಡಿ) ಖಂಡದ ಅಥವಾ (ಇ) ಖಂಡದ ಮೇರೆಗೆ ಪದದಿಂದ ತೆಗೆದುಹಾಕತಕ್ಕದ್ದಲ್ಲ.

**17. ರಾಜ್ಯ ಆಯೋಗದ ಅಧ್ಯಕ್ಷನ, ಸದಸ್ಯನ, ಸದಸ್ಯ – ಕಾರ್ಯದರ್ಶಿಯ ಮತ್ತು ಇತರ ಸಿಬ್ಬಂದಿಯ ಸಂಬಳ ಮತ್ತು ಭತ್ಯೆಗಳು.**– ಅಧ್ಯಕ್ಷನ, ಇತರ ಸದಸ್ಯರ, ಸದಸ್ಯ – ಕಾರ್ಯದರ್ಶಿಯ, ಪೂರಕ ಸಿಬ್ಬಂದಿಯ ಸಂಬಳ ಮತ್ತು ಭತ್ಯೆಗಳಿಗಾಗಿ, ಮತ್ತು ರಾಜ್ಯ ಆಯೋಗದ ಸಮರ್ಪಕ ಕಾರ್ಯ ನಿರ್ವಹಣೆಗೆ ಅಗತ್ಯವಾದ ಇತರ ಆಡಳಿತಾತ್ಮಕ ವೆಚ್ಚಗಳಿಗಾಗಿ ರಾಜ್ಯ ಸರ್ಕಾರವು ಉಪಬಂಧ ಕಲ್ಪಿಸತಕ್ಕದ್ದು.

**18. ರಾಜ್ಯ ಆಯೋಗವಾಗಿ ಕಾರ್ಯ ನಿರ್ವಹಿಸಲು ಯಾವುದೇ ಆಯೋಗವನ್ನು ಅಥವಾ ಸಂಸ್ಥೆಯನ್ನು ಹೆಸರಿಸುವುದು.**– ರಾಜ್ಯ ಸರ್ಕಾರವು, 16ನೇ ಪ್ರಕರಣದಲ್ಲಿ ತಿಳಿಸಿದ ರಾಜ್ಯ ಆಯೋಗದ ಅಧಿಕಾರಗಳನ್ನು ಚಲಾಯಿಸಲು ಅಥವಾ ಪ್ರಕಾರ್ಯಗಳನ್ನು ನಿರ್ವಹಿಸಲು ಯಾವುದೇ ಶಾಸನಬದ್ಧ ಆಯೋಗವನ್ನು ಅಥವಾ ಸಂಸ್ಥೆಯನ್ನು ಹೆಸರಿಸುವುದು ಅಗತ್ಯವೆಂದು ಭಾವಿಸಿದರೆ, ಅದು ಅಧಿಸೂಚನೆಯ ಮೂಲಕ ಹಾಗೆ ಹೆಸರಿಸಬಹುದು.

**19. ಜಂಟಿ ರಾಜ್ಯ ಆಹಾರ ಆಯೋಗ.**– 16ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಎರಡು ಅಥವಾ ಹೆಚ್ಚು ರಾಜ್ಯಗಳು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಜಂಟಿ ಆಹಾರ ಆಯೋಗವನ್ನು ಹೊಂದಿರಬಹುದು.

**20. ವಿಚಾರಣೆಗಳಿಗೆ ಸಂಬಂಧಿಸಿದಂತೆ ಅಧಿಕಾರಗಳು.**– (1) ರಾಜ್ಯ ಆಯೋಗವು, 16ನೇ ಪ್ರಕರಣದ (6)ನೇ ಉಪಪ್ರಕರಣದ (ಬಿ) ಮತ್ತು (ಇ) ಖಂಡಗಳಲ್ಲಿ ತಿಳಿಸಿರುವ ಯಾವುದೇ ವಿಷಯದ ಬಗ್ಗೆ ವಿಚಾರಣೆ ಮಾಡುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5)ಮೇರೆಗೆ ದಾವೆಯ ಅಧಿವಿಚಾರಣೆ ಮಾಡುವಾಗ, ಮತ್ತು ಅದರಲ್ಲೂ ಮುಖ್ಯವಾಗಿ ಈ ಕೆಳಕಂಡ ವಿಷಯಗಳಿಗೆ, ಎಂದರೆ:–

(ಎ) ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಸುವುದು ಹಾಗೂ ಪ್ರಮಾಣಮಾಡಿಸಿ ಅವನನ್ನು ಪರೀಕ್ಷಿಸುವುದು;

(ಬಿ) ಯಾವುದೇ ದಾಖಲೆಗಳನ್ನು ಶೋಧಿಸುವಂತೆ ಮತ್ತು ಹಾಜರುಪಡಿಸುವಂತೆ ಆದೇಶಿಸುವುದು;

(ಸಿ) ಅಫಿಡಾವಿಟ್‌ಗಳಲ್ಲಿ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು; ಮತ್ತು

(ಇ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಾರ್ಯಾಜ್ಞೆಗಳನ್ನು ಹೊರಡಿಸುವುದು

– ಈ ವಿಷಯಗಳಿಗೆ ಸಂಬಂಧಪಟ್ಟಂತೆ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಯಾವ ಪ್ರಕರಣವನ್ನು ಅಧಿವಿಚಾರಣೆ ಮಾಡಲು ಮ್ಯಾಜಿಸ್ಟ್ರೇಟನಿಗೆ ಅಧಿಕಾರವ್ಯಾಪ್ತಿ ಇದೆಯೋ ಆ ಮ್ಯಾಜಿಸ್ಟ್ರೇಟನಿಗೆ ಆ ಯಾವುದೇ ಪ್ರಕರಣವನ್ನು ಕಳುಹಿಸಿ ಕೊಡಲು ರಾಜ್ಯ ಆಯೋಗವು ಅಧಿಕಾರ ಹೊಂದಿರತಕ್ಕದ್ದು ಮತ್ತು ಯಾವುದೇ ಅಂಥ ಪ್ರಕರಣವನ್ನು ಯಾವ ಮ್ಯಾಜಿಸ್ಟ್ರೇಟನಿಗೆ ಕಳುಹಿಸಿಕೊಡಲಾಗಿದೆಯೋ ಆ ಮ್ಯಾಜಿಸ್ಟ್ರೇಟನು, ಆ ಪ್ರಕರಣವನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 346ನೇ ಪ್ರಕರಣದ ಮೇರೆಗೆ ತನಗೆ ಕಳುಹಿಸಿಕೊಟ್ಟಿದ್ದರೆ ಹೇಗೆ ವಿಚಾರಣೆ ಮಾಡುತ್ತಿದ್ದನೋ ಅದೇ ರೀತಿಯಲ್ಲಿ ಆರೋಪಿಯ ವಿರುದ್ಧದ ದೂರನ್ನು ವಿಚಾರಣೆ ಮಾಡಲು ಮುಂದಾಗತಕ್ಕದ್ದು.

**21. ಖಾಲಿಸ್ಥಾನಗಳು, ಇತ್ಯಾದಿ ರಾಜ್ಯ ಆಯೋಗದ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.**– ರಾಜ್ಯ ಆಯೋಗದ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು, –

(ಎ) ರಾಜ್ಯ ಆಯೋಗದಲ್ಲಿ ಯಾವುದೇ ಸ್ಥಾನವು ಖಾಲಿ ಇರುವ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷ ಇರುವ; ಅಥವಾ

(ಬಿ) ರಾಜ್ಯ ಆಯೋಗದ ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ವ್ಯಕ್ತಿಯನ್ನು ನೇಮಕ ಮಾಡಿರುವುದರಲ್ಲಿ ಯಾವುದೇ ದೋಷ ಇರುವ; ಅಥವಾ

(ಸಿ) ರಾಜ್ಯ ಆಯೋಗದ ಕಾರ್ಯವಿಧಾನದಲ್ಲಿ ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಂಥ ಯಾವುದೇ ಅಕ್ರಮತೆ ಇರುವ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

## ಅಧ್ಯಾಯ-VIII

### ಆಹಾರ ಭದ್ರತೆಗಾಗಿ ಕೇಂದ್ರ ಸರ್ಕಾರದ ಬಾಧ್ಯತೆಗಳು

**22. ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಕೇಂದ್ರ ಸಂಗ್ರಹಣಾಗಾರದಿಂದ ಅಗತ್ಯ ಪ್ರಮಾಣದ ಆಹಾರ ಧಾನ್ಯಗಳನ್ನು ಹಂಚಿಕೆ ಮಾಡುವುದು.**-(1) ಕೇಂದ್ರ ಸರ್ಕಾರವು, ಅರ್ಹ ಕುಟುಂಬಗಳಿಗೆ ಸೇರಿದ ವ್ಯಕ್ತಿಗಳಿಗೆ ಆಹಾರ ಧಾನ್ಯಗಳು ನಿಯತವಾಗಿ ಸರಬರಾಜಾಗುವುದನ್ನು ಖಾತರಿಪಡಿಸಿಕೊಳ್ಳಲು, 3ನೇ ಪ್ರಕರಣದ ಮೇರೆಗಿನ ಹಕ್ಕುಗಳ ಪ್ರಕಾರ ಮತ್ತು ಅನುಸೂಚಿ-I ರಲ್ಲಿ ನಿರ್ದಿಷ್ಟಪಡಿಸಿರುವ ಬೆಲೆಗಳಲ್ಲಿ, ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ರಾಜ್ಯ ಸರ್ಕಾರಗಳಿಗೆ ಅಗತ್ಯ ಪ್ರಮಾಣದ ಆಹಾರ ಧಾನ್ಯಗಳನ್ನು ಕೇಂದ್ರ ಸಂಗ್ರಹಣಾಗಾರದಿಂದ ಹಂಚಿಕೆ ಮಾಡತಕ್ಕದ್ದು.

(2) ಕೇಂದ್ರ ಸರ್ಕಾರವು 10ನೇ ಪ್ರಕರಣದ ಮೇರೆಗೆ ಪ್ರತಿಯೊಂದು ರಾಜ್ಯದಲ್ಲಿ ಗುರುತಿಸಿರುವ ಅರ್ಹ ಕುಟುಂಬಗಳಿಗೆ ಸೇರಿದ ವ್ಯಕ್ತಿಗಳ ಸಂಖ್ಯೆಗೆ ಅನುಸಾರವಾಗಿ ಆಹಾರ ಧಾನ್ಯಗಳನ್ನು ಹಂಚಿಕೆ ಮಾಡತಕ್ಕದ್ದು.

(3) ಕೇಂದ್ರ ಸರ್ಕಾರವು, ಅನುಸೂಚಿ-I ರಲ್ಲಿ ತಿಳಿಸಿರುವ ಅರ್ಹ ಕುಟುಂಬಗಳಿಗೆ ಸೇರಿದ ವ್ಯಕ್ತಿಗಳಿಗೆ ನಿರ್ದಿಷ್ಟಪಡಿಸಿದ ಬೆಲೆಗಳಲ್ಲಿ, 4ನೇ, 5ನೇ ಮತ್ತು 6ನೇ ಪ್ರಕರಣಗಳ ಮೇರೆಗಿನ ಹಕ್ಕುಗಳಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರಕ್ಕೆ ಆಹಾರ ಧಾನ್ಯಗಳನ್ನು ಒದಗಿಸತಕ್ಕದ್ದು.

(4) ಉಪಪ್ರಕರಣ (1)ಕ್ಕೆ ಬಾಧಕವಾಗದಂತೆ, ಕೇಂದ್ರ ಸರ್ಕಾರವು, -

(ಎ) ಕೇಂದ್ರ ಸಂಗ್ರಹಣಾಗಾರಕ್ಕಾಗಿ ತನ್ನ ಸ್ವಂತ ಏಜೆನ್ಸಿಗಳ ಮೂಲಕ ಮತ್ತು ರಾಜ್ಯ ಸರ್ಕಾರಗಳ ಮತ್ತು ಅವುಗಳ ಏಜೆನ್ಸಿಗಳ ಮೂಲಕ ಆಹಾರ ಧಾನ್ಯಗಳ ಸಂಗ್ರಹಣೆ ಮಾಡತಕ್ಕದ್ದು;

(ಬಿ) ರಾಜ್ಯಗಳಿಗೆ ಆಹಾರ ಧಾನ್ಯಗಳನ್ನು ಹಂಚಿಕೆ ಮಾಡತಕ್ಕದ್ದು;

(ಸಿ) ಪ್ರತಿಯೊಂದು ರಾಜ್ಯದಲ್ಲಿ ಕೇಂದ್ರ ಸರ್ಕಾರವು ಗೊತ್ತುಪಡಿಸಿದ ಡಿಪೋಗಳಿಗೆ, ಹಂಚಿಕೆಗೆ ಅನುಸಾರವಾಗಿ, ಆಹಾರ ಧಾನ್ಯಗಳ ಸಾಗಣೆಗೆ ಏರ್ಪಾಟು ಮಾಡತಕ್ಕದ್ದು;

(ಡಿ) ರಾಜ್ಯ ಸರ್ಕಾರವು ರಾಜ್ಯದೊಳಗೆ ಸಾಗಣೆಗಾಗಿ, ಆಹಾರ ಧಾನ್ಯಗಳ ನಿರ್ವಹಣೆಗಾಗಿ ಮತ್ತು ನ್ಯಾಯಬೆಲೆ ಅಂಗಡಿಗಳ ವ್ಯಾಪಾರಿಗಳಿಗೆ ಸಂದಾಯ ಮಾಡಿರುವ ವ್ಯತ್ಯಾಸದ ಹಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಮಾಡಿದ ವೆಚ್ಚವನ್ನು ಭರಿಸಲು ರಾಜ್ಯ ಸರ್ಕಾರಕ್ಕೆ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಿಬಂಧನೆಗಳಿಗೆ ಅನುಸಾರವಾಗಿ ಮತ್ತು ಅಂಥ ರೀತಿಯಲ್ಲಿ ನೆರವನ್ನು ನೀಡತಕ್ಕದ್ದು; ಮತ್ತು

(ಇ) ವಿವಿಧ ಹಂತಗಳಲ್ಲಿ ಅಗತ್ಯವಾದ ಆಧುನಿಕ ಮತ್ತು ವೈಜ್ಞಾನಿಕವಾದ ದಾಸ್ತಾನು ಸೌಲಭ್ಯಗಳನ್ನು ಸೃಜಿಸತಕ್ಕದ್ದು ಮತ್ತು ನಿರ್ವಹಿಸಿಕೊಂಡು ಬರತಕ್ಕದ್ದು.

**23. ಕೆಲವು ಸಂದರ್ಭಗಳಲ್ಲಿ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಹಣದ ಏರ್ಪಾಟುಗಳು.**-ಕೇಂದ್ರ ಸಂಗ್ರಹಣಾಗಾರದಿಂದ ಒಂದು ರಾಜ್ಯಕ್ಕೆ ಆಹಾರ ಧಾನ್ಯಗಳನ್ನು ಕಡಿಮೆ ಪ್ರಮಾಣದಲ್ಲಿ ಸರಬರಾಜು ಮಾಡಿದ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು, IIನೇ ಅಧ್ಯಾಯದ ಮೇರೆಗಿನ ಹೊಣೆಗಾರಿಕೆಗಳನ್ನು ಈಡೇರಿಸುವುದಕ್ಕಾಗಿ ಕೇಂದ್ರ ಸರ್ಕಾರವು, ನಿಯಮಿಸಬಹುದಾದಂಥ ರೀತಿಯಲ್ಲಿ ರಾಜ್ಯ ಸರ್ಕಾರಕ್ಕೆ ಆಹಾರ ಧಾನ್ಯಗಳ ಸರಬರಾಜು ಎಷ್ಟು ಕಡಿಮೆಯಾಗಿತ್ತೋ ಅಷ್ಟರಮಟ್ಟಿಗೆ ಹಣವನ್ನು ಒದಗಿಸತಕ್ಕದ್ದು.

## ಅಧ್ಯಾಯ-IX

### ಆಹಾರ ಭದ್ರತೆಗಾಗಿ ರಾಜ್ಯ ಸರ್ಕಾರದ ಬಾಧ್ಯತೆಗಳು

**24. ಆಹಾರ ಭದ್ರತೆಯನ್ನು ಖಾತರಿಪಡಿಸಿಕೊಳ್ಳಲು ಕಾರ್ಯಯೋಜನೆಗಳ ಅನುಷ್ಠಾನ ಮತ್ತು ಅವುಗಳ ಮೇಲ್ವಿಚಾರಣೆ.**-

(1) ರಾಜ್ಯ ಸರ್ಕಾರವು, ತನ್ನ ರಾಜ್ಯದಲ್ಲಿರುವ ಉದ್ದೇಶಿತ ಫಲಾನುಭವಿಗಳಿಗೆ ಆಹಾರ ಭದ್ರತೆಯನ್ನು ಖಾತರಿಪಡಿಸುವುದಕ್ಕಾಗಿ, ಪ್ರತಿಯೊಂದು ಕಾರ್ಯಯೋಜನೆಗಾಗಿ ಮತ್ತು ತನ್ನದೇ ಕಾರ್ಯಯೋಜನೆಗಳಿಗಾಗಿ, ಕೇಂದ್ರ ಸರ್ಕಾರವು ನೀಡಿರುವ ಮಾರ್ಗಸೂಚಿಗಳಿಗೆ ಅನುಸಾರವಾಗಿ, ಕೇಂದ್ರ ಸರ್ಕಾರದ ವಿವಿಧ ಮಂತ್ರಾಲಯಗಳ ಮತ್ತು ಇಲಾಖೆಗಳ ಕಾರ್ಯಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಮತ್ತು ಅವುಗಳ ಮೇಲ್ವಿಚಾರಣೆ ಮಾಡುವುದಕ್ಕೆ ಜವಾಬ್ದಾರಿಯಾಗಿರತಕ್ಕದ್ದು.

(2) ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇರೆಗೆ,-

(ಎ) ಅನುಸೂಚಿ-Iರಲ್ಲಿ ನಿರ್ದಿಷ್ಟಪಡಿಸಿದ ಬೆಲೆಯಲ್ಲಿ, ಕೇಂದ್ರ ಸರ್ಕಾರವು ರಾಜ್ಯದಲ್ಲಿ ಗೊತ್ತುಪಡಿಸಿದ ಡಿಪೋಗಳಿಂದ ಆಹಾರ ಧಾನ್ಯಗಳನ್ನು ಪಡೆದುಕೊಳ್ಳುವುದು, ಹಂಚಿಕೆ ಮಾಡಿರುವ ಆಹಾರ ಧಾನ್ಯಗಳನ್ನು ಅದರ ಅಧಿಕೃತ ಏಜೆನ್ಸಿಗಳ ಮೂಲಕ ಪ್ರತಿಯೊಂದು ನ್ಯಾಯಬೆಲೆ ಅಂಗಡಿಗಳ ಬಾಗಿಲಿಗೇ ತಲುಪಿಸುವ ಸಲುವಾಗಿ ರಾಜ್ಯದೊಳಗೆ ಹಂಚಿಕೆಗೆ ವ್ಯವಸ್ಥೆ ಮಾಡುವುದು; ಮತ್ತು

(ಬಿ) ಅನುಸೂಚಿ-Iರಲ್ಲಿ ನಿರ್ದಿಷ್ಟಪಡಿಸಿರುವ ಬೆಲೆಯಲ್ಲಿ ಅರ್ಹ ವ್ಯಕ್ತಿಗಳಿಗೆ ಆಹಾರ ಧಾನ್ಯಗಳು ನಿಜವಾಗಿಯೂ ತಲುಪುತ್ತಿವೆ ಅಥವಾ ಸರಬರಾಜಾಗುತ್ತಿವೆ ಎಂಬುದನ್ನು ಖಾತರಿಪಡಿಸಿಕೊಳ್ಳುವುದು

– ರಾಜ್ಯ ಸರ್ಕಾರದ ಕರ್ತವ್ಯವಾಗಿರತಕ್ಕದ್ದು.

(3) 4ನೇ, 5ನೇ ಮತ್ತು 6ನೇ ಪ್ರಕರಣಗಳ ಮೇರೆಗೆ ಪಡೆಯಲು ಹಕ್ಕು ಇರುವ ಆಹಾರ ಧಾನ್ಯಗಳ ಅಗತ್ಯತೆಗಳಿಗಾಗಿ, ಅರ್ಹ ಕುಟುಂಬಗಳಿಗೆ ಸೇರಿದ ವ್ಯಕ್ತಿಗಳಿಗೆ ಅನುಸೂಚಿ-Iರಲ್ಲಿ ನಿರ್ದಿಷ್ಟಪಡಿಸಿದ ಬೆಲೆಯಲ್ಲಿ, ಕೇಂದ್ರ ಸರ್ಕಾರವು ರಾಜ್ಯದಲ್ಲಿ ಗೊತ್ತುಪಡಿಸಿದ ಡಿಪೋಗಳಿಂದ ಆಹಾರ ಧಾನ್ಯಗಳನ್ನು ಪಡೆದುಕೊಳ್ಳುವುದು ಮತ್ತು ಮೇಲೆ ಹೇಳಿದ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವಂತೆ ಹಕ್ಕುಳ್ಳ ಸೌಲಭ್ಯಗಳು ನಿಜವಾಗಿಯೂ ತಲುಪುತ್ತಿವೆ ಎಂಬುದನ್ನು ಖಾತರಿಪಡಿಸಿಕೊಳ್ಳುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿರತಕ್ಕದ್ದು.

(4) ಅಧ್ಯಾಯ-IIರ ಮೇರೆಗೆ ಹಕ್ಕುಳ್ಳ ವ್ಯಕ್ತಿಗಳಿಗೆ ಪಡೆಯಲು ಹಕ್ಕು ಇರುವಷ್ಟು ಪ್ರಮಾಣದ ಆಹಾರ ಧಾನ್ಯಗಳನ್ನು ಅಥವಾ ಊಟವನ್ನು ಒದಗಿಸದಿರುವ ಸಂದರ್ಭಗಳಲ್ಲಿ, 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಆಹಾರ ಭದ್ರತೆ ಭತ್ಯೆಯನ್ನು ಸಂದಾಯ ಮಾಡುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿರತಕ್ಕದ್ದು.

(5) ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸಮರ್ಪಕ ಕಾರ್ಯಾಚರಣೆಗಳಿಗಾಗಿ, ಪ್ರತಿಯೊಂದು ರಾಜ್ಯ ಸರ್ಕಾರವು,-

(ಎ) ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮತ್ತು ಇತರ ಆಹಾರ ಆಧಾರಿತ ಕಲ್ಯಾಣ ಕಾರ್ಯಯೋಜನೆಗಳ ಮೇರೆಗೆ ಅಗತ್ಯವಾದ ಆಹಾರ ಧಾನ್ಯಗಳನ್ನು ದಾಸ್ತಾನು ಮಾಡುವುದಕ್ಕಾಗಿ ಸಾಕಾಗುವಷ್ಟು ಸ್ಥಳಾವಕಾಶವನ್ನು ಕಲ್ಪಿಸಿ ರಾಜ್ಯ, ಜಿಲ್ಲಾ ಮತ್ತು ಬ್ಲಾಕ್ ಮಟ್ಟಗಳಲ್ಲಿ ವೈಜ್ಞಾನಿಕವಾದ ದಾಸ್ತಾನು ಸೌಲಭ್ಯಗಳನ್ನು ಸೃಜಿಸತಕ್ಕದ್ದು ಮತ್ತು ಅವುಗಳನ್ನು ನಿರ್ವಹಿಸಿಕೊಂಡು ಬರತಕ್ಕದ್ದು;

(ಬಿ) ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮಗಳ ಮತ್ತು ಗೊತ್ತುಪಡಿಸಿದ ಇತರ ಏಜೆನ್ಸಿಗಳ ಸಾಮರ್ಥ್ಯವನ್ನು ಸೂಕ್ತವಾಗಿ ಬಲಪಡಿಸತಕ್ಕದ್ದು ;

(ಸಿ) ಕಾಲಕಾಲಕ್ಕೆ ತಿದ್ದುಪಡಿಯಾದ ಅತ್ಯಾವಶ್ಯಕ ಸರಕುಗಳ ಅಧಿನಿಯಮ, 1955ರ (1955ರ 10) ಮೇರೆಗೆ ಮಾಡಿದ ಸಾರ್ವಜನಿಕ ವಿತರಣಾ ವ್ಯವಸ್ಥೆ (ನಿಯಂತ್ರಣ) ಆದೇಶ, 2001ರಲ್ಲಿ ಹೇಳಿರುವ ಸಂಬಂಧಪಟ್ಟ ನಿಬಂಧನೆಗಳಿಗೆ ಅನುಸಾರವಾಗಿ ನ್ಯಾಯಬೆಲೆ ಅಂಗಡಿಗಳಿಗೆ ಸಂಸ್ಥೆಗಳ ಮೂಲಕ ಲೈಸೆನ್ಸ್ ನೀಡುವ ವ್ಯವಸ್ಥೆಯನ್ನು ಕಲ್ಪಿಸತಕ್ಕದ್ದು.

## ಅಧ್ಯಾಯ-X

### ಸ್ಥಳೀಯ ಪ್ರಾಧಿಕಾರಗಳ ಬಾಧ್ಯತೆಗಳು

**25. ಸ್ಥಳೀಯ ಪ್ರಾಧಿಕಾರಗಳು ತಮ್ಮ ಪ್ರದೇಶಗಳಲ್ಲಿ ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವುದು.-** (1) ಸ್ಥಳೀಯ ಪ್ರಾಧಿಕಾರಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಈ ಅಧಿನಿಯಮವನ್ನು ಸೂಕ್ತವಾಗಿ ಅನುಷ್ಠಾನಗೊಳಿಸುವುದಕ್ಕೆ ಜವಾಬ್ದಾರಿಯಾಗಿರತಕ್ಕದ್ದು.

(2) ಉಪಪ್ರಕರಣ (1)ಕ್ಕೆ ಪ್ರತಿಕೂಲವಾಗದಂತೆ, ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವುದಕ್ಕಾಗಿ ಹೆಚ್ಚುವರಿ ಜವಾಬ್ದಾರಿಗಳನ್ನು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಸ್ಥಳೀಯ ಪ್ರಾಧಿಕಾರಕ್ಕೆ ವಹಿಸಬಹುದು.

**26. ಸ್ಥಳೀಯ ಪ್ರಾಧಿಕಾರದ ಬಾಧ್ಯತೆಗಳು.-** ಈ ಅಧಿನಿಯಮದ ಉಪಬಂಧಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಸಿದ್ಧಪಡಿಸಿರುವ ಕೇಂದ್ರ ಸರ್ಕಾರದ ಮಂತ್ರಾಲಯಗಳ ಮತ್ತು ರಾಜ್ಯ ಸರ್ಕಾರಗಳ ಇಲಾಖೆಗಳ ವಿವಿಧ ಕಾರ್ಯಯೋಜನೆಗಳನ್ನು ಅನುಷ್ಠಾನಗೊಳಿಸುವಾಗ, ಸ್ಥಳೀಯ ಪ್ರಾಧಿಕಾರಗಳಿಗೆ ಆಯಾಯ ರಾಜ್ಯ ಸರ್ಕಾರಗಳು ಅಧಿಸೂಚನೆಯ ಮೂಲಕ ವಹಿಸಿಕೊಡಬಹುದಾದಂಥ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು ಸ್ಥಳೀಯ ಪ್ರಾಧಿಕಾರಗಳ ಜವಾಬ್ದಾರಿಯಾಗಿರತಕ್ಕದ್ದು.

## ಅಧ್ಯಾಯ-XI

### ಪಾರದರ್ಶಕತೆ ಮತ್ತು ಜವಾಬ್ದಾರಿ

**27 ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ದಾಖಲೆಗಳನ್ನು ಮುಕ್ತವಾಗಿಡುವುದು.-**ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಸಾರ್ವಜನಿಕರಿಗೆ ಲಭ್ಯವಾಗುವ ಸ್ಥಳಗಳಲ್ಲಿ ಇಡತಕ್ಕದ್ದು ಮತ್ತು ಸಾರ್ವಜನಿಕರ ಪರಿಶೀಲನೆಗೆ ಮುಕ್ತವಾಗಿಡತಕ್ಕದ್ದು.

**28. ಸಾಮಾಜಿಕ ಪರಿಶೋಧನೆ ನಡೆಸುವುದು.–** (1) ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು ಅಥವಾ ಯಾವುದೇ ಇತರ ಪ್ರಾಧಿಕಾರವು ಅಥವಾ ರಾಜ್ಯ ಸರ್ಕಾರವು ಅಧಿಕೃತಗೊಳಿಸಬಹುದಾದಂಥ ನಿಕಾಯವು, ನ್ಯಾಯಬೆಲೆ ಅಂಗಡಿಗಳ ಕಾರ್ಯನಿರ್ವಹಣೆಯ, ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮತ್ತು ಇತರ ಕಲ್ಯಾಣ ಕಾರ್ಯಯೋಜನೆಗಳ ನಿಯತಕಾಲಿಕ ಸಾಮಾಜಿಕ ಪರಿಶೋಧನೆ ಮಾಡತಕ್ಕದ್ದು ಅಥವಾ ಪರಿಶೋಧನೆ ಮಾಡಿಸತಕ್ಕದ್ದು ಮತ್ತು ಅದರ ನಿರ್ಣಯಗಳನ್ನು ಪ್ರಕಟಿಸುವಂತೆ ಮಾಡತಕ್ಕದ್ದು ಮತ್ತು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಅವಶ್ಯಕ ಕ್ರಮವನ್ನು ಕೈಗೊಳ್ಳತಕ್ಕದ್ದು.

(2) ಸಾಮಾಜಿಕ ಪರಿಶೋಧನೆಯನ್ನು ನಡೆಸುವ ಅನುಭವ ಹೊಂದಿರುವ ಸ್ವತಂತ್ರ ಏಜೆನ್ಸಿಗಳ ಮೂಲಕ ಸಾಮಾಜಿಕ ಪರಿಶೋಧನೆ ನಡೆಸುವುದು ಅಥವಾ ಮಾಡಿಸುವುದು ಅವಶ್ಯವೆಂದು ಕೇಂದ್ರ ಸರ್ಕಾರವು ಪರಿಗಣಿಸಿದರೆ ಅದು ಹಾಗೆ ಮಾಡತಕ್ಕದ್ದು ಅಥವಾ ಮಾಡಿಸತಕ್ಕದ್ದು.

**29. ವಿಚಕ್ಷಣ ಸಮಿತಿಗಳ ರಚನೆ.–** (1) ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ಇರುವುದನ್ನು ಮತ್ತು ಸೂಕ್ತ ಕಾರ್ಯ ನಿರ್ವಹಿಸುತ್ತಿರುವುದನ್ನು ಮತ್ತು ಅಂಥ ವ್ಯವಸ್ಥೆಯಲ್ಲಿ ಕಾರ್ಯನಿರತರಾಗಿರುವ ಕಾರ್ಯನಿರ್ವಾಹಕರು ಜವಾಬ್ದಾರರಾಗಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಪ್ರತಿಯೊಂದು ರಾಜ್ಯ ಸರ್ಕಾರವು, ಕಾಲಕಾಲಕ್ಕೆ ತಿದ್ದುಪಡಿಯಾದ ಆವಶ್ಯಕ ಸರಕುಗಳ ಅಧಿನಿಯಮ, 1955 (1955ರ 10)ರ ಮೇರೆಗೆ ಮಾಡಿದ ಸಾರ್ವಜನಿಕ ವಿತರಣಾ ವ್ಯವಸ್ಥೆ (ನಿಯಂತ್ರಣ) ಆದೇಶ, 2001ರಲ್ಲಿ ನಿರ್ದಿಷ್ಟಪಡಿಸಿದಂತೆ, ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ಬ್ಲಾಕ್ ಮಟ್ಟದಲ್ಲಿ ಮತ್ತು ನ್ಯಾಯಬೆಲೆ ಅಂಗಡಿಗಳ ಮಟ್ಟದಲ್ಲಿ, ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಅಂಥ ವ್ಯಕ್ತಿಗಳನ್ನು ಒಳಗೊಂಡಿರುವ ವಿಚಕ್ಷಣ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಅಂಥ ವಿಚಕ್ಷಣ ಸಮಿತಿಗಳಲ್ಲಿ ಸ್ಥಳೀಯ ಪ್ರಾಧಿಕಾರಗಳಿಗೆ, ಅನುಸೂಚಿತ ಜಾತಿಗಳಿಗೆ, ಅನುಸೂಚಿತ ಬುಡಕಟ್ಟುಗಳಿಗೆ, ಮಹಿಳೆಯರಿಗೆ ಮತ್ತು ನಿರಾಶ್ರಿತರಿಗೆ ಅಥವಾ ಅಂಗವಿಕಲರಿಗೆ ಸೂಕ್ತ ಪ್ರಾತಿನಿಧ್ಯ ಇರತಕ್ಕದ್ದು.

(2) ವಿಚಕ್ಷಣ ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ಈ ಅಧಿನಿಯಮದ ಮೇರೆಗಿನ ಎಲ್ಲ ಕಾರ್ಯಯೋಜನೆಗಳ ಅನುಷ್ಠಾನವನ್ನು ನಿಯತವಾಗಿ ಮೇಲ್ವಿಚಾರಣೆ ಮಾಡತಕ್ಕದ್ದು;

(ಬಿ) ಈ ಅಧಿನಿಯಮದ ಉಪಬಂಧಗಳ ಯಾವುದೇ ಉಲ್ಲಂಘನೆಯ ಬಗ್ಗೆ, ಜಿಲ್ಲಾ ಕುಂದುಕೊರತೆ ನಿವಾರಣಾಧಿಕಾರಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು; ಮತ್ತು

(ಸಿ) ತಾನು ಯಾವುದಾದರೂ ದುರ್ವ್ಯವಹಾರವನ್ನು ಅಥವಾ ಹಣದ ದುರ್ಬಳಕೆಯನ್ನು ಪತ್ತೆ ಹಚ್ಚಿದ್ದರೆ, ಆ ಬಗ್ಗೆ ಜಿಲ್ಲಾ ಕುಂದುಕೊರತೆಗಳ ನಿವಾರಣಾ ಅಧಿಕಾರಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು.

## ಅಧ್ಯಾಯ–XII

## ಆಹಾರ ಭದ್ರತೆಯ ಸಂವರ್ಧನೆಗೆ ವ್ಯವಸ್ಥೆಗಳು

**30. ದೂರ ಪ್ರದೇಶಗಳಲ್ಲಿ, ಗುಡ್ಡಗಾಡು ಪ್ರದೇಶಗಳಲ್ಲಿ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಆಹಾರ ಭದ್ರತೆ.–** ಕೇಂದ್ರ ಸರ್ಕಾರವು ಮತ್ತು ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಮತ್ತು ನಿರ್ದಿಷ್ಟಪಡಿಸಿದ ಹಕ್ಕುದಾರಿಕೆಗಳನ್ನು ದೊರಕಿಸಿಕೊಡುವುದಕ್ಕಾಗಿ ಕಾರ್ಯಯೋಜನೆಗಳನ್ನು ಅನುಷ್ಠಾನಗೊಳಿಸುವಾಗ, ಅತ್ಯಂತ ಅವಗಣನೆಗೆ ಒಳಗಾದವರು, ಅದರಲ್ಲೂ ವಿಶೇಷವಾಗಿ ದೂರದ ಪ್ರದೇಶಗಳಲ್ಲಿ ಮತ್ತು ಹೋಗಿ ಬರಲು ಕಷ್ಟಕರವಾಗಿರುವ ಪ್ರದೇಶಗಳಲ್ಲಿ, ಗುಡ್ಡಗಾಡು ಪ್ರದೇಶಗಳಲ್ಲಿ, ಬುಡಕಟ್ಟು ಪ್ರದೇಶಗಳಲ್ಲಿ ವಾಸಿಸುವ ಜನರ ಆಹಾರ ಭದ್ರತೆಯನ್ನು ಖಾತರಿಪಡಿಸುವುದಕ್ಕಾಗಿ ಅವರ ಅಗತ್ಯತೆಗಳಿಗೆ ವಿಶೇಷ ಗಮನ ನೀಡತಕ್ಕದ್ದು.

**31. ಆಹಾರ ಮತ್ತು ಪೌಷ್ಟಿಕ ಆಹಾರ ಭದ್ರತೆಯ ಮತ್ತಷ್ಟು ಸಂವರ್ಧನೆಗೆ ಕ್ರಮಗಳು.–**ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳು, ಆಹಾರ ಮತ್ತು ಪೌಷ್ಟಿಕ ಆಹಾರ ಭದ್ರತೆಯನ್ನು ಮತ್ತಷ್ಟು ಸಂವರ್ಧನೆ ಮಾಡುವ ಉದ್ದೇಶಕ್ಕಾಗಿ, ಅನುಸೂಚಿ–III ರಲ್ಲಿ ನಿರ್ದಿಷ್ಟಪಡಿಸಿದ ಧ್ಯೇಯೋದ್ದೇಶಗಳನ್ನು ಈಡೇರಿಸಲು ಹಂತಹಂತವಾಗಿ ಶ್ರಮಿಸತಕ್ಕದ್ದು.

## ಅಧ್ಯಾಯ –XIII

## ಸಂಕೀರ್ಣ

**32. ಇತರ ಕಲ್ಯಾಣ ಕಾರ್ಯಯೋಜನೆಗಳು.–** (1) ಆಹಾರ ಆಧಾರಿತ ಇತರ ಕಲ್ಯಾಣ ಕಾರ್ಯಯೋಜನೆಗಳನ್ನು ಮುಂದುವರಿಸುವುದಕ್ಕೆ ಅಥವಾ ಅವುಗಳನ್ನು ರೂಪಿಸುವುದಕ್ಕೆ ಈ ಅಧಿನಿಯಮದ ಉಪಬಂಧಗಳು, ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಅಡ್ಡಿಯಾಗತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ಕಲ್ಪಿಸಿದ ಪ್ರಯೋಜನಗಳಿಗಿಂತ ಹೆಚ್ಚಿನ ಪ್ರಯೋಜನಗಳನ್ನು, ಕಲ್ಪಿಸುವಂಥ ಆಹಾರ ಅಥವಾ ಪೌಷ್ಟಿಕ ಆಹಾರ ಆಧಾರಿತ ಯೋಜನೆಗಳನ್ನು ಅಥವಾ ಕಾರ್ಯಯೋಜನೆಗಳನ್ನು ರಾಜ್ಯ ಸರ್ಕಾರವು, ತನ್ನ ಸ್ವಂತ ಸಂಪನ್ಮೂಲಗಳಿಂದ ಮುಂದುವರಿಸಬಹುದು ಅಥವಾ ರೂಪಿಸಬಹುದು.

**33. ದಂಡಗಳು.–** ರಾಜ್ಯ ಆಯೋಗವು ಯಾವುದೇ ದೂರನ್ನು ಅಥವಾ ಅಪೀಲನ್ನು ತೀರ್ಮಾನಿಸುತ್ತಿರುವ ಕಾಲದಲ್ಲಿ, ಜಿಲ್ಲಾ ಕುಂದುಕೊರತೆ ನಿವಾರಣಾ ಅಧಿಕಾರಿಯು ಶಿಫಾರಸು ಮಾಡಿದ ಪರಿಹಾರವನ್ನು ಒದಗಿಸಲು ಯಾರೇ ಲೋಕ ನೌಕರನು ಅಥವಾ ಸಾರ್ವಜನಿಕ ಪ್ರಾಧಿಕಾರವು, ಯಾವುದೇ ಸಮಂಜಸ ಕಾರಣವಿಲ್ಲದೆ ವಿಫಲನಾದ ಅಥವಾ ಅಂಥ ಶಿಫಾರಸನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಿದ ತಪಿತಸ್ಥನಾಗಿದ್ದಾನೆಂದು ರಾಜ್ಯ ಆಯೋಗಕ್ಕೆ ಕಂಡುಬಂದರೆ, ಆ ಲೋಕ ನೌಕರನು ಅಥವಾ ಪ್ರಾಧಿಕಾರವು ಐದು ಸಾವಿರ ರೂಪಾಯಿಗಳನ್ನು ಮೀರದ ದಂಡಕ್ಕೆ ಗುರಿಯಾಗತಕ್ಕದ್ದು :

ಪರಂತು, ಆ ಲೋಕ ನೌಕರನಿಗೆ ಅಥವಾ ಸಂದರ್ಭಾನುಸಾರ ಸಾರ್ವಜನಿಕ ಪ್ರಾಧಿಕಾರಕ್ಕೆ ಯಾವುದೇ ದಂಡವನ್ನು ವಿಧಿಸುವುದಕ್ಕೆ ಮೊದಲು ಅಹವಾಲನ್ನು ಹೇಳಿಕೊಳ್ಳಲು ಸಮಂಜಸ ಅವಕಾಶವನ್ನು ನೀಡತಕ್ಕದ್ದು.

**34. ನ್ಯಾಯ ನಿರ್ಣಯ ಮಾಡಲು ಅಧಿಕಾರ.–** (1) ರಾಜ್ಯ ಆಯೋಗವು, ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸಮಂಜಸ ಅವಕಾಶವನ್ನು ನೀಡಿದ ನಂತರ ಯಾವುದೇ ದಂಡವನ್ನು ವಿಧಿಸುವ ಉದ್ದೇಶಕ್ಕಾಗಿ ನಿಯಮಿಸಿದ ರೀತಿಯಲ್ಲಿ ವಿಚಾರಣೆಯನ್ನು ನಡೆಸಲು ತನ್ನ ಯಾರೇ ಸದಸ್ಯರನ್ನು ಪ್ರಕರಣ 33ರ ಮೇರೆಗಿನ ದಂಡವನ್ನು ನ್ಯಾಯಿಕವಾಗಿ ನಿರ್ಧರಣೆ ಮಾಡುವ ಉದ್ದೇಶಕ್ಕಾಗಿ ನ್ಯಾಯ ನಿರ್ಣಯ ಮಾಡುವ ಅಧಿಕಾರಿಯೆಂದು ಅಧಿಕೃತಗೊಳಿಸತಕ್ಕದ್ದು.

(2) ವಿಚಾರಣೆಯನ್ನು ನಡೆಸುವಾಗ, ಯಾವ ಸಾಕ್ಷ್ಯವು ಅಥವಾ ದಾಖಲೆಯ ವಿಚಾರಣೆಯ ವಸ್ತುವಿಷಯಕ್ಕೆ ಉಪಯುಕ್ತವಾಗಬಹುದೆಂದು ಅಥವಾ ಸುಸಂಗತವಾಗಬಹುದೆಂದು ನ್ಯಾಯ ನಿರ್ಣಯ ಅಧಿಕಾರಿಯು ಅಭಿಪ್ರಾಯಪಡುವನೋ ಆ ಸಾಕ್ಷ್ಯವನ್ನು ನೀಡುವುದಕ್ಕಾಗಿ ಅಥವಾ ಆ ದಾಖಲೆಯನ್ನು ಹಾಜರುಪಡಿಸುವುದಕ್ಕಾಗಿ, ಪ್ರಕರಣದ ವಾಸ್ತವಾಂಶಗಳನ್ನು ಮತ್ತು ಸಂದರ್ಭ ಸನ್ನಿವೇಶಗಳನ್ನು ಚೆನ್ನಾಗಿ ತಿಳಿದಿರುವ ಯಾರೇ ವ್ಯಕ್ತಿಯನ್ನು ಸಮನು ಮಾಡುವುದಕ್ಕೆ ಮತ್ತು ಅವನು ಹಾಜರಾಗುವಂತೆ ಒತ್ತಾಯಿಸುವುದಕ್ಕೆ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅಂಥ ವಿಚಾರಣೆಯ ನಂತರ, ಜಿಲ್ಲಾ ಕುಂದುಕೊರತೆ ನಿವಾರಣಾ ಅಧಿಕಾರಿಯು ಶಿಫಾರಸು ಮಾಡಿದ ಪರಿಹಾರವನ್ನು ಒದಗಿಸಲು ಯಾವುದೇ ಸಮಂಜಸ ಕಾರಣವಿಲ್ಲದೆ ಸದರಿ ಅಧಿಕಾರಿಯು ವಿಫಲನಾಗಿದ್ದಾನೆಂದು ಅಥವಾ ಅಂಥ ಶಿಫಾರಸ್ಸನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಿದ್ದಾನೆಂದು ನ್ಯಾಯ ನಿರ್ಣಯ ಅಧಿಕಾರಿಗೆ ಮನವರಿಕೆಯಾದರೆ, ಅವನು 33ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಸೂಕ್ತವೆಂದು ತಾನು ಭಾವಿಸುವಂಥ ದಂಡವನ್ನು ವಿಧಿಸಬಹುದು.

**35. ಕೇಂದ್ರ ಸರ್ಕಾರವು ಮತ್ತು ರಾಜ್ಯ ಸರ್ಕಾರವು ಅಧಿಕಾರವನ್ನು ವಹಿಸಿಕೊಡಲು ಅಧಿಕಾರ.–** (1) ಕೇಂದ್ರ ಸರ್ಕಾರವು, ತಾನು ಚಲಾಯಿಸಬಹುದಾದ ಅಧಿಕಾರಗಳನ್ನು (ನಿಯಮಗಳನ್ನು ರಚಿಸಲು ಇರುವ ಅಧಿಕಾರವನ್ನು ಹೊರತುಪಡಿಸಿ), ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂದರ್ಭ ಸನ್ನಿವೇಶಗಳಲ್ಲಿ ಮತ್ತು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಹಾಗೂ ಪರಿಮಿತಿಗಳಿಗೆ ಒಳಪಟ್ಟು, ರಾಜ್ಯ ಸರ್ಕಾರವು ಸಹ ಅಥವಾ ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಅಧೀನನಾದ ಯಾರೇ ಅಧಿಕಾರಿಯು ಸಹ ಚಲಾಯಿಸತಕ್ಕದ್ದೆಂದು ನಿರ್ದೇಶಿಸಬಹುದು.

(2) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ತಾನು ಚಲಾಯಿಸಬಹುದಾದ ಅಧಿಕಾರಗಳನ್ನು (ನಿಯಮಗಳನ್ನು ರಚಿಸಲು ಇರುವ ಅಧಿಕಾರವನ್ನು ಹೊರತುಪಡಿಸಿ) ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂದರ್ಭ ಸನ್ನಿವೇಶಗಳಲ್ಲಿ ಮತ್ತು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಹಾಗೂ ಪರಿಮಿತಿಗಳಿಗೆ ಒಳಪಟ್ಟು, ರಾಜ್ಯ ಸರ್ಕಾರಕ್ಕೆ ಅಧೀನನಾದ ಯಾರೇ ಅಧಿಕಾರಿಯು ಸಹ ಚಲಾಯಿಸತಕ್ಕದ್ದೆಂದು ನಿರ್ದೇಶಿಸಬಹುದು.

**36. ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು.–** ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಮೇರೆಗೆ ರೂಪಿಸಿದ ಕಾರ್ಯ ಯೋಜನೆಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಅಂಥ ಕಾನೂನಿನ ಬಲದಿಂದ ಜಾರಿಗೆ ಬಂದಿರುವ ಯಾವುದೇ ಲಿಖಿತದಲ್ಲಿ ಅಸಂಗತವಾದುದು ಏನೇ ಒಳಗೊಂಡಿದ್ದರೂ ಪರಿಣಾಮವನ್ನು ಹೊಂದಿರತಕ್ಕದ್ದು.

**37. ಅನುಸೂಚಿಗಳನ್ನು ತಿದ್ದುಪಡಿ ಮಾಡಲು ಅಧಿಕಾರ.–** (1) ಅನುಸೂಚಿ–Iಕ್ಕೆ ಅಥವಾ ಅನುಸೂಚಿ–IIಕ್ಕೆ ಅಥವಾ ಅನುಸೂಚಿ–IIIಕ್ಕೆ ಅಥವಾ ಅನುಸೂಚಿ–IVಕ್ಕೆ ತಿದ್ದುಪಡಿ ಮಾಡುವುದು ಅಗತ್ಯವೆಂದು ಅಥವಾ ವಿಹಿತವೆಂದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದರೆ, ಅದು, ಅಧಿಸೂಚನೆಯ ಮೂಲಕ ಹಾಗೆ ತಿದ್ದುಪಡಿ ಮಾಡಬಹುದು ಮತ್ತು ಆ ತರುವಾಯ, ಸಂದರ್ಭಾನುಸಾರ,

ಅನುಸೂಚಿ–Iನ್ನು ಅಥವಾ ಅನುಸೂಚಿ–IIನ್ನು ಅಥವಾ ಅನುಸೂಚಿ–IIIನ್ನು ಅಥವಾ ಅನುಸೂಚಿ–IVನ್ನು ತದನುಸಾರವಾಗಿ ತಿದ್ದುಪಡಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(2) ಉಪಪ್ರಕರಣ(1)ರ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯ ಪ್ರತಿಯನ್ನು, ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**38. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಕಾಲಕಾಲಕ್ಕೆ, ಅಗತ್ಯವೆಂದು ತಾನು ಭಾವಿಸಬಹುದಾದಂಥ ನಿರ್ದೇಶನಗಳನ್ನು, ರಾಜ್ಯ ಸರ್ಕಾರಗಳಿಗೆ ನೀಡಬಹುದು ಮತ್ತು ರಾಜ್ಯ ಸರ್ಕಾರಗಳು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**39. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ ಮತ್ತು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಅಂಥ ನಿಯಮಗಳು, ಅದರಲ್ಲೂ ಮುಖ್ಯವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು ಎಂದರೆ:-

(ಎ) 4ನೇ ಪ್ರಕರಣದ (ಬಿ) ಖಂಡದ ಮೇರೆಗೆ ಗರ್ಭಿಣಿ ಸ್ತ್ರೀಯರಿಗೆ ಹಾಗೂ ಹಾಲುಣಿಸುವ ತಾಯಂದಿರಿಗೆ ಹೆರಿಗೆ ಸೌಲಭ್ಯವನ್ನು ಕಲ್ಪಿಸಿಕೊಡುವುದಕ್ಕಾಗಿ ವೆಚ್ಚವನ್ನು ಭಾಗ ಮಾಡಿಕೊಳ್ಳುವುದನ್ನು ಒಳಗೊಂಡಿರುವ ಕಾರ್ಯಯೋಜನೆ;

(ಬಿ) 7ನೇ ಪ್ರಕರಣದ ಮೇರೆಗೆ ವೆಚ್ಚವನ್ನು ಭಾಗ ಮಾಡಿಕೊಳ್ಳುವುದೂ ಸೇರಿದಂತೆ 4ನೇ, 5ನೇ ಮತ್ತು 6ನೇ ಪ್ರಕರಣಗಳ ಮೇರೆಗೆ ಹಕ್ಕುದಾರಿಕೆಗಳನ್ನು ಒಳಗೊಳ್ಳುವ ಕಾರ್ಯಯೋಜನೆಗಳು;

(ಸಿ) 8ನೇ ಪ್ರಕರಣದ ಮೇರೆಗೆ ಹಕ್ಕುಳ್ಳ ವ್ಯಕ್ತಿಗಳಿಗೆ ಆಹಾರ ಭದ್ರತೆ ಭತ್ಯೆಯ ಮೊಬಲಗು, ಸಂದಾಯದ ಕಾಲ ಮತ್ತು ಸಂದಾಯದ ರೀತಿ;

(ಡಿ) 12ನೇ ಪ್ರಕರಣದ (2)ನೇ ಉಪಪ್ರಕರಣದ (ಹೆಚ್) ಖಂಡದ ಮೇರೆಗೆ ಅಂಥ ಕ್ಷೇತ್ರಗಳಲ್ಲಿ ಮತ್ತು ಅಂಥ ರೀತಿಯಲ್ಲಿ ಉದ್ದೇಶಿತ ಫಲಾನುಭವಿಗಳ ಆಹಾರ ಧಾನ್ಯಗಳನ್ನು ಪಡೆಯುವ ಹಕ್ಕುಗಳನ್ನು ಖಾತರಿಪಡಿಸುವ ಸಲುವಾಗಿ ಅವರಿಗೆ ನಗದು ವರ್ಗಾವಣೆ, ಆಹಾರ ಕೂಪನ್‌ಗಳ ನೀಡಿಕೆ ಅಥವಾ ಇತರ ಕಾರ್ಯಯೋಜನೆಗಳನ್ನು ಪ್ರಾರಂಭಿಸುವುದು ;

(ಇ) 22ನೇ ಪ್ರಕರಣದ (4)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ವೆಚ್ಚವನ್ನು ಭರಿಸುವ ಸಲುವಾಗಿ ರಾಜ್ಯ ಸರ್ಕಾರಗಳಿಗೆ ನೆರವನ್ನು ಒದಗಿಸುವುದಕ್ಕೆ ಸಂಬಂಧಿಸಿದ ಸೂತ್ರಗಳು ಮತ್ತು ರೀತಿಗಳು;

(ಎಫ್) 23ನೇ ಪ್ರಕರಣದ ಮೇರೆಗೆ, ಆಹಾರ ಧಾನ್ಯಗಳ ಪೂರೈಕೆ ಕಡಿಮೆ ಆದ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಯಾವ ರೀತಿಯಲ್ಲಿ ನಿಧಿಗಳನ್ನು ಒದಗಿಸಬೇಕೋ ಆ ರೀತಿ;

(ಜಿ) ಕೇಂದ್ರ ಸರ್ಕಾರವು, ನಿಯಮಗಳ ಮೂಲಕ ಯಾವ ಇತರ ವಿಷಯವನ್ನು ನಿಯಮಿಸಬೇಕಾಗಿದೆಯೋ ಅಥವಾ ನಿಯಮಿಸಬಹುದಾಗಿದೆಯೋ ಆ ಯಾವುದೇ ಇತರ ವಿಷಯ ಅಥವಾ ಯಾವ ವಿಷಯದ ಸಂಬಂಧದಲ್ಲಿ ಉಪಬಂಧವನ್ನು ಕಲ್ಪಿಸಬೇಕಾಗಿದೆಯೋ ಆ ವಿಷಯ.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು, ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**40. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ಮತ್ತು ಮುಂಚಿತವಾಗಿ ಪ್ರಕಟಿಸಬೇಕೆಂಬ ಷರತ್ತಿಗೆ ಒಳಪಟ್ಟು ಮತ್ತು ಈ ಅಧಿನಿಯಮಕ್ಕೆ ಹಾಗೂ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳಿಗೆ ಸುಸಂಗತವಾಗಿರುವ ನಿಯಮಗಳನ್ನು ರಚಿಸಬಹುದು.

(2) ಅಂಥ ನಿಯಮಗಳು ಅದರಲ್ಲೂ ಮುಖ್ಯವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು ಎಂದರೆ:-

(ಎ) 10ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಆದ್ಯತಾ ಕುಟುಂಬಗಳನ್ನು ಗುರುತಿಸಲು ಮಾರ್ಗಸೂಚಿಗಳು;

(ಬಿ) 14ನೇ ಪ್ರಕರಣದ ಮೇರೆಗೆ ಕುಂದುಕೊರತೆಗಳ ನಿವಾರಣೆಗೆ ಆಂತರಿಕ ವ್ಯವಸ್ಥೆ;

(ಸಿ) 15ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಜಿಲ್ಲಾ ಕುಂದುಕೊರತೆಗಳ ನಿವಾರಣಾ ಅಧಿಕಾರಿಯಾಗಿ ನೇಮಕಗೊಳ್ಳುವುದಕ್ಕೆ ಇರಬೇಕಾದ ಅರ್ಹತೆಗಳು ಮತ್ತು ಅವನ ಅಧಿಕಾರಗಳು;

(ಡಿ) 15ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಜಿಲ್ಲಾ ಕುಂದುಕೊರತೆಗಳ ನಿವಾರಣಾ ಅಧಿಕಾರಿಯ ನೇಮಕದ ವಿಧಾನ ಮತ್ತು ನಿಬಂಧನೆಗಳು ಹಾಗೂ ಷರತ್ತುಗಳು;

(ಇ) 15ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಜಿಲ್ಲಾ ಕುಂದು ಕೊರತೆಗಳ ನಿವಾರಣಾ ಅಧಿಕಾರಿಯು ದೂರುಗಳನ್ನು ವಿಚಾರಣೆ ಮಾಡುವ ರೀತಿ ಮತ್ತು ಆ ವಿಚಾರಣೆಗಾಗಿ ಕಾಲಮಿತಿ ಮತ್ತು ಅದೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ಅಪೀಲುಗಳನ್ನು ಸಲ್ಲಿಸುವ ರೀತಿ ಮತ್ತು ಅಪೀಲುಗಳನ್ನು ಸಲ್ಲಿಸುವುದಕ್ಕೆ ಕಾಲಮಿತಿ;

(ಎಫ್) 16ನೇ ಪ್ರಕರಣದ (5)ನೇ (7)ನೇ ಉಪಪ್ರಕರಣದ ಮೇರೆಗೆ ರಾಜ್ಯ ಆಯೋಗದ ಅಧ್ಯಕ್ಷನ, ಇತರ ಸದಸ್ಯರ ಹಾಗೂ ಸದಸ್ಯ-ಕಾರ್ಯದರ್ಶಿಯ ನೇಮಕದ ವಿಧಾನ ಮತ್ತು ನೇಮಕದ ನಿಬಂಧನೆಗಳು

ಮತ್ತು ಷರತ್ತುಗಳು, ಆಯೋಗದ ಸಭೆಗಳಿಗೆ ಸಂಬಂಧಿಸಿದ ಕಾರ್ಯವಿಧಾನ ಮತ್ತು ಅದರ ಅಧಿಕಾರಗಳು;

(ಜಿ) 16ನೇ ಪ್ರಕರಣದ (8)ನೇ ಉಪಪ್ರಕರಣದ ಮೇರೆಗೆ ರಾಜ್ಯ ಆಯೋಗದ ಸಿಬ್ಬಂದಿಯ ನೇಮಕದ ವಿಧಾನ, ಅವರ ಸಂಬಳಗಳು, ಭತ್ಯೆಗಳು ಹಾಗೂ ಸೇವೆಯ ಷರತ್ತುಗಳು;

(ಹೆಚ್) 27ನೇ ಪ್ರಕರಣದ ಮೇರೆಗೆ ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಸಂಬಂಧಿತ ದಾಖಲೆಗಳನ್ನು ಯಾವ ರೀತಿಯಲ್ಲಿ ಸಾರ್ವಜನಿಕರಿಗೆ ಲಭ್ಯವಾಗುವ ಸ್ಥಳದಲ್ಲಿ ಇಡಬೇಕೋ, ಆ ರೀತಿ ಮತ್ತು ಯಾವ ರೀತಿಯಲ್ಲಿ ಸಾರ್ವಜನಿಕರ ಪರಿಶೀಲನೆಗಾಗಿ ಮುಕ್ತವಾಗಿ ಇಡಬೇಕೋ ಆ ರೀತಿ;

(ಐ) 28ನೇ ಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ ನ್ಯಾಯಬೆಲೆ ಅಂಗಡಿಗಳ ಕಾರ್ಯನಿರ್ವಹಣೆಯನ್ನು, ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮತ್ತು ಇತರ ಕಲ್ಯಾಣ ಕಾರ್ಯಯೋಜನೆಗಳ ಸಾಮಾಜಿಕ ಪರಿಶೋಧನೆಯನ್ನು ನಡೆಸಬೇಕೋ ಆ ರೀತಿ;

(ಜೆ) 29ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಿಚಕ್ಷಣ ಸಮಿತಿಗಳ ರಚನೆ;

(ಕೆ) 43ನೇ ಪ್ರಕರಣದ ಮೇರೆಗೆ ಸಾಂಸ್ಥಿಕ ವ್ಯವಸ್ಥೆಗಳನ್ನು ಬಳಸಿಕೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯೋಜನೆಗಳು ಅಥವಾ ಕಾರ್ಯಕ್ರಮಗಳು;

(ಎಲ್) ರಾಜ್ಯ ಸರ್ಕಾರವು ನಿಯಮಗಳ ಮೂಲಕ ಯಾವ ಇತರ ವಿಷಯವನ್ನು ನಿಯಮಿಸಬೇಕಾಗಿದೆಯೋ ಅಥವಾ ನಿಯಮಿಸಬಹುದಾಗಿದೆಯೋ ಆ ಯಾವುದೇ ಇತರ ವಿಷಯ ಅಥವಾ ಯಾವ ವಿಷಯದ ಸಂಬಂಧದಲ್ಲಿ ಉಪಬಂಧವನ್ನು ಕಲ್ಪಿಸಬೇಕಾಗಿದೆಯೋ ಆ ವಿಷಯ.

(3) ರಾಜ್ಯ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅಥವಾ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಮತ್ತು ನೀಡಿದ ಮಾರ್ಗಸೂಚಿಗಳನ್ನು ಅದನ್ನು ರಚಿಸಿದ ಅಥವಾ ಹೊರಡಿಸಿದ ಅಥವಾ ನೀಡಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಎರಡು ಸದನಗಳನ್ನು ಒಳಗೊಂಡಿದ್ದರೆ, ಅದರ ಪ್ರತಿಯೊಂದು ಸದನದ ಮುಂದೆ, ಮತ್ತು ರಾಜ್ಯ ವಿಧಾನಮಂಡಲವು ಒಂದೇ ಸದನವನ್ನು ಒಳಗೊಂಡಿದ್ದರೆ ಆ ಸದನದ ಮುಂದೆ ಇಡತಕ್ಕದ್ದು.

**41. ಕಾರ್ಯಯೋಜನೆಗಳು, ಮಾರ್ಗಸೂಚಿ, ಮುಂತಾದವುಗಳಿಗಾಗಿ ತಾತ್ಕಾಲಿಕ ಉಪಬಂಧಗಳು.–** ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿರುವ ಕಾರ್ಯಯೋಜನೆಗಳ, ಮಾರ್ಗಸೂಚಿಗಳ, ಆದೇಶಗಳ ಮತ್ತು ಆಹಾರ ಗುಣಮಟ್ಟ, ಕುಂದುಕೊರತೆಗಳ ನಿವಾರಣಾ ವ್ಯವಸ್ಥೆ, ವಿಚಕ್ಷಣ ಸಮಿತಿಗಳು ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು ಮತ್ತು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಅಂಥ ಕಾರ್ಯಯೋಜನೆಗಳನ್ನು, ಮಾರ್ಗಸೂಚಿಗಳನ್ನು, ಆದೇಶಗಳನ್ನು ಮತ್ತು ಆಹಾರ ಗುಣಮಟ್ಟವನ್ನು, ಕುಂದುಕೊರತೆ ನಿವಾರಣಾ ವ್ಯವಸ್ಥೆ, ವಿಚಕ್ಷಣ ಸಮಿತಿಗಳನ್ನು ನಿರ್ದಿಷ್ಟಪಡಿಸುವವರೆಗೆ ಅಥವಾ ಅಧಿಸೂಚಿಸುವವರೆಗೆ ಅವು ಜಾರಿಯಲ್ಲಿರತಕ್ಕದ್ದು:

ಪರಂತು, ಸದರಿ ಕಾರ್ಯಯೋಜನೆಗಳ, ಮಾರ್ಗಸೂಚಿಗಳ, ಆದೇಶಗಳ ಮತ್ತು ಆಹಾರ ಗುಣಮಟ್ಟದ, ಕುಂದುಕೊರತೆ ನಿವಾರಣಾ ವ್ಯವಸ್ಥೆಯ ಮೇರೆಗೆ ಅಥವಾ ವಿಚಕ್ಷಣ ಸಮಿತಿಗಳು ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯದ ಮೂಲಕ ಅಥವಾ ಕೈಗೊಂಡ ಯಾವುದೇ ಕ್ರಮದ ಮೂಲಕ ರದ್ದುಗೊಳಿಸಿದ ಹೊರತು ಹಾಗೂ ರದ್ದುಗೊಳಿಸುವವರೆಗೆ ತದನುಸಾರವಾಗಿ ಅವು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

**42. ತೊಂದರೆಗಳನ್ನು ನಿವಾರಿಸಲು ಅಧಿಕಾರ.– (1)** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಾಗ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸಿ, ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**43. ಇತರ ಉದ್ದೇಶಗಳಿಗೆ ಸಾಂಸ್ಥಿಕ ವ್ಯವಸ್ಥೆಯನ್ನು ಬಳಸಿಕೊಳ್ಳುವುದು.–**15ನೇ ಮತ್ತು 16ನೇ ಪ್ರಕರಣಗಳ ಮೇರೆಗೆ ನೇಮಕಗೊಳ್ಳುವ ಅಥವಾ ರಚಿಸುವ ಪ್ರಾಧಿಕಾರಗಳ ಸೇವೆಗಳನ್ನು, ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಇತರ ಕಾರ್ಯಯೋಜನೆಗಳನ್ನು ಅಥವಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಾಗ, ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಬಳಸಿಕೊಳ್ಳಬಹುದು.

**44. ಅನಿವಾರ್ಯ ಸಂದರ್ಭಗಳು.–** ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗೆ ಹಕ್ಕುಳ್ಳ ಯಾರೇ ವ್ಯಕ್ತಿಯ ಕ್ಲೇಮಿಗೆ, ಈ ಅಧಿನಿಯಮದ ಮೇರೆಗೆ, ಅಂಥ ವ್ಯಕ್ತಿಗೆ ಆಹಾರ ಧಾನ್ಯಗಳನ್ನು ಅಥವಾ ಊಟವನ್ನು ನಿಯತವಾಗಿ ಒದಗಿಸುವುದಕ್ಕೆ ಅಡ್ಡಿಯುಂಟು ಮಾಡುವಂಥ ಯುದ್ಧ, ಪ್ರವಾಹ, ಕ್ಷಾಮ, ಅಗ್ನಿ ಅನಾಹುತ, ಚಂಡಮಾರುತ ಅಥವಾ ಭೂಕಂಪದಂಥ ಸಂದರ್ಭಗಳನ್ನು ಹೊರತುಪಡಿಸಿ, ಹೊಣೆಯಾಗಿರತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು, ಯೋಜನಾ ಆಯೋಗದೊಡನೆ ಸಮಾಲೋಚಿಸಿ, ಅಂಥ ವ್ಯಕ್ತಿಗೆ ಆಹಾರ ಧಾನ್ಯವನ್ನು ಅಥವಾ ಊಟವನ್ನು ನಿಯತವಾಗಿ ಒದಗಿಸುವುದಕ್ಕೆ ಅಡ್ಡಿಪಡಿಸುವಂಥ ಯಾವುದೇ ಸಂದರ್ಭ ಸನ್ನಿವೇಶವು ಉದ್ಭವಿಸಿದೆಯೇ ಅಥವಾ ಇಲ್ಲವೇ ಅಥವಾ ಅಂಥ ಪರಿಸ್ಥಿತಿ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಘೋಷಿಸಬಹುದು.

45. **ನಿರಸನ ಮತ್ತು ಉಳಿಸುವಿಕೆಗಳು.**– (1) ರಾಷ್ಟ್ರೀಯ ಆಹಾರ ಭದ್ರತೆ ಅಧ್ಯಾದೇಶ, 2013 (2013ರ ಅಧ್ಯಾದೇಶ ಸಂಖ್ಯೆ 7)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ, ಸದರಿ ಅಧ್ಯಾದೇಶದ ಮೇರೆಗೆ,–

(ಎ) ಮಾಡಿದ ಯಾವುದೇ ಕಾರ್ಯವನ್ನು, ಕೈಗೊಂಡ ಯಾವುದೇ ಕ್ರಮವನ್ನು ಅಥವಾ ಯಾವುದೇ ಅರ್ಹ ಕುಟುಂಬಗಳನ್ನು ಗುರುತಿಸಿರುವುದನ್ನು; ಅಥವಾ

(ಬಿ) ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ, ಯಾವುದೇ ಹಕ್ಕನ್ನು, ಹಕ್ಕುದಾರಿಕೆಯನ್ನು, ವಿಶೇಷಾಧಿಕಾರವನ್ನು, ಬಾಧ್ಯತೆಯನ್ನು ಅಥವಾ ಹೊಣೆಗಾರಿಕೆಯನ್ನು; ಅಥವಾ

(ಸಿ) ರೂಪಿಸಿದ ಯಾವುದೇ ಮಾರ್ಗಸೂಚಿಗಳನ್ನು ಅಥವಾ ನೀಡಿದ ನಿರ್ದೇಶನಗಳನ್ನು; ಅಥವಾ

(ಡಿ) ಮೇಲೆ ಹೇಳಿದಂತೆ ಅಂಥ ಹಕ್ಕಿನ, ಹಕ್ಕುದಾರಿಕೆಯ, ವಿಶೇಷಾಧಿಕಾರದ, ಬಾಧ್ಯತೆಯ ಅಥವಾ ಹೊಣೆಗಾರಿಕೆಯ ಸಂಬಂಧದಲ್ಲಿ ಪ್ರಾರಂಭಿಸಿದ, ನಡೆಸಿದ ಅಥವಾ ಮುಂದುವರಿಸಿದ ಯಾವುವೇ ತನಿಖೆಯನ್ನು, ವಿಚಾರಣೆಯನ್ನು ಅಥವಾ ಇತರ ಯಾವುದೇ ಕಾನೂನು ವ್ಯವಹರಣೆಯನ್ನು; ಅಥವಾ

(ಇ) ಯಾವುದೇ ಅಪರಾಧದ ಸಂಬಂಧದಲ್ಲಿ ವಿಧಿಸಿದ ಯಾವುದೇ ದಂಡನೆಯನ್ನು,

– ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ, ಕೈಗೊಳ್ಳಲಾಗಿದೆ, ರಚಿಸಲಾಗಿದೆ, ಆರ್ಜಿಸಲಾಗಿದೆ, ಪ್ರಾಪ್ತವಾಗಿದೆ, ವಹಿಸಲಾಗಿದೆ, ರೂಪಿಸಲಾಗಿದೆ, ಹೊರಡಿಸಲಾಗಿದೆ, ಪ್ರಾರಂಭಿಸಲಾಗಿದೆ, ನಡೆಸಲಾಗಿದೆ, ಮುಂದುವರಿಸಲಾಗಿದೆ ಅಥವಾ ವಿಧಿಸಲಾಗಿದೆ ಎಂದು ಭಾವಿಸತಕ್ಕದ್ದು.

## ಅನುಸೂಚಿ I

[3(1), 22(1), (3) ಮತ್ತು 24(2), (3)ನೇ ಪ್ರಕರಣಗಳನ್ನು ನೋಡಿ]

**ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ರಿಯಾಯಿತಿ ಬೆಲೆಗಳು**

ಅರ್ಹ ಕುಟುಂಬಗಳು, 3ನೇ ಪ್ರಕರಣದ ಮೇರೆಗೆ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಪ್ರತೀ ಕಿಲೋ.ಗ್ರಾಂ. ಅಕ್ಕಿಗೆ 3 ರೂ.ಗಳನ್ನು ಮೀರದ, ಪ್ರತೀ ಕಿಲೋ.ಗ್ರಾಂ. ಗೋಧಿಗೆ 2 ರೂ.ಗಳನ್ನು ಮೀರದ ಮತ್ತು ಪ್ರತಿ ಕಿಲೋ.ಗ್ರಾಂ. ಕಾಳುಗಳಿಗೆ 1 ರೂಪಾಯಿಯನ್ನು ಮೀರದ ರಿಯಾಯಿತಿ ಬೆಲೆಯಲ್ಲಿ ಮತ್ತು ಆ ತರುವಾಯ, ಸಂದರ್ಭಾನುಸಾರ,–

(i) ಗೋಧಿ ಮತ್ತು ಕಾಳುಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಮೀರದಂತೆ; ಹಾಗೂ

(ii) ಅಕ್ಕಿಗೆ ಪಡೆದ ಕನಿಷ್ಠ ಬೆಂಬಲ ಬೆಲೆಯನ್ನು ಮೀರದಂತೆ

– ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು;

## ಅನುಸೂಚಿ II

[4(ಎ), 5(1) ಮತ್ತು 6ನೇ ಪ್ರಕರಣಗಳನ್ನು ನೋಡಿ]

ಪೌಷ್ಟಿಕಾಂಶದ ಮಟ್ಟಗಳು

**ಪೌಷ್ಟಿಕಾಂಶದ ಮಟ್ಟಗಳು:** ಮಕ್ಕಳ ಸಮಗ್ರ ಅಭಿವೃದ್ಧಿ ಸೇವಾ ಯೋಜನೆಗೆ ಅನುಸಾರವಾಗಿ "ಮನೆಗೆ ಒಯ್ಯಲು ನೀಡುವ ರೇಷನ್‌ಗಳನ್ನು" ಅಥವಾ "ಪೌಷ್ಟಿಕಾಂಶಗಳಿಂದ ಕೂಡಿದ ಬಿಸಿಬಿಸಿಯಾಗಿ" ತಯಾರಿಸಿದ ಊಟವನ್ನು ಒದಗಿಸುವ ಮೂಲಕ 6 ತಿಂಗಳುಗಳಿಂದ 3 ವರ್ಷಗಳವರೆಗಿನ, 3 ವರ್ಷಗಳಿಂದ 6 ವರ್ಷಗಳವರೆಗಿನ ವಯೋಮಾನದ ಮಕ್ಕಳಿಗೆ ಮತ್ತು ಗರ್ಭಿಣಿ ಸ್ತ್ರೀಯರಿಗೆ ಮತ್ತು ಹಾಲುಣಿಸುವ ತಾಯಂದಿರಿಗೆ ದೊರಕಿಸಿಕೊಡಬೇಕಾದ ಪೌಷ್ಟಿಕಾಂಶದ ಮಟ್ಟಗಳು; ಮತ್ತು ಮಧ್ಯಾಹ್ನದ ಊಟದ ಯೋಜನೆಯ ಮೇರೆಗೆ ಕಿರಿಯ ಮತ್ತು ಹಿರಿಯ ಪ್ರಾಥಮಿಕ ತರಗತಿಯ ಮಕ್ಕಳಿಗೆ ನಿಗದಿಪಡಿಸಿರುವ ನೀಡುವ ಪೌಷ್ಟಿಕಾಂಶದ ಮಟ್ಟಗಳು ಇಂತಿವೆ:

| ಕ್ರಮ ಸಂಖ್ಯೆ | ಪ್ರವರ್ಗ | ಊಟದ ಮಾದರಿ | ಕ್ಯಾಲೋರಿಗಳು (ಕೆಸಿಎಎಲ್) | ಪ್ರೋಟೀನ್ (ಜಿ) |
|---|---|---|---|---|
| 1. | ಮಕ್ಕಳು (6 ತಿಂಗಳಿನಿಂದ 3 ವರ್ಷಗಳವರೆಗಿನ ವಯೋಮಾನದವರು) | ಮನೆಗೆ ಒಯ್ಯಲು ನೀಡುವ ರೇಷನ್ | 500 | 12–15 |
| 2. | ಮಕ್ಕಳು (3 ರಿಂದ 6 ವರ್ಷಗಳವರೆಗಿನ ವಯೋಮಾನದವರು) | ಬೆಳಗಿನ ತಿಂಡಿ ಮತ್ತು ಬಿಸಿಬಿಸಿಯಾಗಿ ತಯಾರಿಸಿದ ಊಟ | 500 | 12–15 |
| 3. | ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳು (6 ತಿಂಗಳುಗಳಿಂದ 6 ವರ್ಷಗಳವರೆಗಿನ ವಯೋಮಾನದವರು) | ಮನೆಗೆ ಒಯ್ಯಲು ನೀಡುವ ರೇಷನ್ | 800 | 20–25 |
| 4. | ಕಿರಿಯ ಪ್ರಾಥಮಿಕ ತರಗತಿಗಳು | ಬಿಸಿಬಿಸಿಯಾಗಿ ತಯಾರಿಸಿದ ಊಟ | 450 | 12 |
| 5. | ಹಿರಿಯ ಪ್ರಾಥಮಿಕ ತರಗತಿಗಳು | ಬಿಸಿಬಿಸಿಯಾಗಿ ತಯಾರಿಸಿದ ಊಟ | 700 | 20 |
| 6. | ಗರ್ಭಿಣಿಯರು ಮತ್ತು ಹಾಲೂಣಿಸುವ ತಾಯಂದಿರು | ಮನೆಗೆ ಒಯ್ಯಲು ನೀಡುವ ರೇಷನ್ | 600 | 18–20 |

**ಅನುಸೂಚಿ III**

(31ನೇ ಪ್ರಕರಣ ನೋಡಿ)

ಆಹಾರ ಭದ್ರತೆಯ ಸಂವರ್ಧನೆಗೆ ವ್ಯವಸ್ಥೆಗಳು

(1) ಕೃಷಿ ಪುನಶ್ಚೇತನ

(ಎ) ಸಣ್ಣ ಮತ್ತು ಅತೀಸಣ್ಣ ರೈತರ ಹಿತಾಸಕ್ತಿಯನ್ನು ಕಾಪಾಡಲು ಕ್ರಮಗಳನ್ನು ಕೈಗೊಳ್ಳುವ ಮೂಲಕ ಕೃಷಿಯಲ್ಲಿ ಸುಧಾರಣೆಗಳನ್ನು ತರುವುದು;

(ಬಿ) ಉತ್ಪಾದಕತೆಯನ್ನು ಮತ್ತು ಉತ್ಪನ್ನವನ್ನು ಹೆಚ್ಚಿಸುವುದಕ್ಕಾಗಿ, ಸಂಶೋಧನೆ ಮತ್ತು ಅಭಿವೃದ್ಧಿ, ವಿಸ್ತರಣಾ ಸೇವೆಗಳು, ಕಿರು ಮತ್ತು ಸಣ್ಣ ನೀರಾವರಿ ಸೌಲಭ್ಯವನ್ನು, ವಿದ್ಯುತ್ ಮತ್ತು ವಿದ್ಯುತ್ ಒಳಗೊಂಡಂತೆ ಕೃಷಿಯಲ್ಲಿ ಹಣ ಹೂಡಿಕೆಗಳನ್ನು ಹೆಚ್ಚಿಸುವುದು;

(ಸಿ) ತಕ್ಕ ಬೆಲೆಗಳು, ಪರಿಕರಗಳನ್ನು, ಸಾಲವನ್ನು ನೀರಾವರಿ ಸೌಲಭ್ಯವನ್ನು, ವಿದ್ಯುತ್ತನ್ನು ಪಡೆದುಕೊಳ್ಳಲು ಅವಕಾಶ, ಬೆಳೆ ವಿಮೆ ಮುಂತಾದವುಗಳ ರೂಪದಲ್ಲಿ ರೈತರಿಗೆ ಜೀವನೋಪಾಯ ಭದ್ರತೆಯನ್ನು ಖಾತರಿಪಡಿಸುವುದು;

(ಡಿ) ಜಮೀನನ್ನು ಮತ್ತು ನೀರನ್ನು ಆಹಾರೋತ್ಪಾದನೆಗೆ ಹೊರತುಪಡಿಸಿ ಅನಗತ್ಯ ಉದ್ದೇಶಕ್ಕೆ ಬಳಸುವುದನ್ನು ನಿಷೇಧಿಸುವುದು.

(2) ಖರೀದಿಗೆ, ದಾಸ್ತಾನಿಗೆ ಮತ್ತು ರವಾನೆಗೆ ಸಂಬಂಧಿಸಿದ ಕಾರ್ಯಕ್ರಮಗಳು,–

(ಎ) ಕಾಳುಗಳ ಸಂಗ್ರಹಣೆಯೂ ಸೇರಿದಂತೆ ಬೇರೆಬೇರೆ ಕಡೆಗಳಲ್ಲಿ ಆಹಾರ ಧಾನ್ಯಗಳ ಸಂಗ್ರಹಣೆಗೆ ಪ್ರೋತ್ಸಾಹ ಧನ ನೀಡುವುದು;

(ಬಿ) ಸಂಗ್ರಹಣಾ ಕಾರ್ಯಾಚರಣೆಗಳನ್ನು ಆಯಾಯ ಪ್ರದೇಶಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವುದು;

(ಸಿ) ಸಾಕಷ್ಟು ಪ್ರಮಾಣದಲ್ಲಿ ಅತ್ಯಾಧುನಿಕವಾಗಿ ಹಾಗೂ ವೈಜ್ಞಾನಿಕವಾಗಿ ಬೇರೆಬೇರೆ ಕಡೆಗಳಲ್ಲಿ ದಾಸ್ತಾನು ಸೌಲಭ್ಯವನ್ನು ಹೆಚ್ಚಿಸುವುದು;

(ಡಿ) ಆಹಾರ ಧಾನ್ಯಗಳ ಸಾಗಣೆಗೆ ಅತ್ಯಂತ ಹೆಚ್ಚಿನ ಆದ್ಯತೆ ನೀಡುವುದು ಮತ್ತು ಆಹಾರ ಧಾನ್ಯಗಳು ಹೇರಳವಾಗಿ ಲಭ್ಯವಿರುವ ಪ್ರದೇಶದಿಂದ ಬಳಸುವ ಪ್ರದೇಶಗಳಿಗೆ ಆಹಾರಧಾನ್ಯಗಳನ್ನು ಸಾಗಿಸಲು ಅನುಕೂಲ ಕಲ್ಪಿಸುವ ಸಲುವಾಗಿ ರೈಲ್ವೆ ಮಾರ್ಗದ ಸಾಮರ್ಥ್ಯವನ್ನು ವಿಸ್ತರಿಸುವುದೂ ಸೇರಿದಂತೆ ಈ ಉದ್ದೇಶಕ್ಕಾಗಿ ಆಹಾರಧಾನ್ಯಗಳನ್ನು ಸಾಗಿಸಲು ಸಾಕಷ್ಟು ಸಂಖ್ಯೆಯ ರೇಕ್‌ಗಳನ್ನು ಒದಗಿಸುವುದು.

(3) ಇತರೆ ಅವಕಾಶಗಳು,

(ಎ) ಶುದ್ಧವಾದ ಮತ್ತು ಸಾಕಷ್ಟು ಪ್ರಮಾಣದ ಕುಡಿಯುವ ನೀರು ಮತ್ತು ನೈರ್ಮಲ್ಯ;

(ಬಿ) ಆರೋಗ್ಯ ಪಾಲನೆ ಸೌಲಭ್ಯ;

(ಸಿ) ವಯಸ್ಕ ಹೆಣ್ಣು ಮಕ್ಕಳಿಗೆ ಪೂರಕ ಪೌಷ್ಟಿಕಾಂಶ, ಆರೋಗ್ಯ ಮತ್ತು ಶಿಕ್ಷಣ;

(ಡಿ) ಹಿರಿಯ ನಾಗರಿಕರಿಗೆ, ಅಂಗವಿಕಲರಿಗೆ ಮತ್ತು ಒಂಟಿ ಹೆಣ್ಣುಮಕ್ಕಳಿಗೆ ಸಾಕಷ್ಟು ಪಿಂಚಣಿಗಳು

– ಇವುಗಳಿಗೆ ಅವಕಾಶ ಕಲ್ಪಿಸುವುದು.

## ಅನುಸೂಚಿ IV

(3(1)ನೇ ಪ್ರಕರಣ ನೋಡಿ)

ರಾಜ್ಯವಾರು ಆಹಾರ ಧಾನ್ಯಗಳ ಹಂಚಿಕೆ

| ಕ್ರಮ ಸಂಖ್ಯೆ | ರಾಜ್ಯಗಳ ಹೆಸರು | ಪ್ರಮಾಣ (ಲಕ್ಷ ಟನ್‌ಗಳಲ್ಲಿ) |
|---|---|---|
| 1 | ಆಂಧ್ರ ಪ್ರದೇಶ | 32.10 |
| 2 | ಅರುಣಾಚಲ ಪ್ರದೇಶ | 0.89 |
| 3 | ಅಸ್ಸಾಂ | 16.95 |
| 4 | ಬಿಹಾರ | 55.27 |
| 5 | ಛತ್ತೀಸ್‌ಗಢ | 12.91 |
| 6 | ದೆಹಲಿ | 5.73 |
| 7 | ಗೋವಾ | 0.59 |
| 8 | ಗುಜರಾತ್ | 23.95 |
| 9 | ಹರಿಯಾಣ | 7.95 |
| 10 | ಹಿಮಾಚಲ ಪ್ರದೇಶ | 5.08 |
| 11 | ಜಮ್ಮು ಮತ್ತು ಕಾಶ್ಮೀರ | 7.51 |
| 12 | ಜಾರ್ಖಂಡ್ | 16.96 |
| 13 | ಕರ್ನಾಟಕ | 25.56 |
| 14 | ಕೇರಳ | 14.25 |
| 15 | ಮಧ್ಯ ಪ್ರದೇಶ | 34.68 |
| 16 | ಮಹಾರಾಷ್ಟ್ರ | 45.02 |
| 17 | ಮಣಿಪುರ | 1.51 |
| 18 | ಮೇಘಾಲಯ | 1.76 |
| 19 | ಮಿಜೋರಾಂ | 0.66 |
| 20 | ನಾಗಾಲ್ಯಾಂಡ್ | 1.38 |
| 21 | ಒಡಿಸ್ಸಾ | 21.09 |
| 22 | ಪಂಜಾಬ್ | 8.70 |
| 23 | ರಾಜಸ್ಥಾನ | 27.92 |
| 24 | ಸಿಕ್ಕಿಂ | 0.44 |
| 25 | ತಮಿಳುನಾಡು | 36.78 |

| | | |
|---|---|---|
| 26 | ತ್ರಿಪುರ | 2.71 |
| 27 | ಉತ್ತರ ಪ್ರದೇಶ | 96.15 |
| 28 | ಉತ್ತರ ಖಂಡ್ | 5.03 |
| 29 | ಪಶ್ಚಿಮ ಬಂಗಾಳ | 38.49 |
| 30 | ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು | 0.16 |
| 31 | ಚಂಡಿಗಢ | 0.31 |
| 32 | ದಾದ್ರಾ ಮತ್ತು ನಗರ್ ಹವೇಲಿ | 0.15 |
| 33 | ದಾಮನ್ ಮತ್ತು ದೀವ್ | 0.07 |
| 34 | ಲಕ್ಷದ್ವೀಪ | 0.05 |
| 35 | ಪುದುಚೇರಿ | 0.50 |
| ಒಟ್ಟು | | 549.26 |

**ಡಾ. ಜಿ. ನಾರಾಯಣ ರಾಜು**
ಕಾರ್ಯದರ್ಶಿ
ಭಾರತ ಸರ್ಕಾರ

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಪ್ರ:200, ಕಾ.ಸೂ. ಪಿ–11, ದಿ:8–6–2020